ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 180 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 18.01.2025 • ಶನಿವಾರ • ಪುಟ:04 • ಬೆಲೆ:2
Volume:02 • Issue: 180 • PRGI No:KARKAN/2023/88055 • VIJAYANAGARA • 18.01.2025 • Saturday • Page:04 • Rs:2

Many audiences find print more trustworthy than digital.
Print offers permanence and tangibility that enhance brand credibility and build consumer trust.

1,10,000+ Digital E-PAPER READERS

No.1 HAMPI TIMES LEADING VIJAYANAGARA District News Paper

Contact for Advertisements: 9448633038

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com

ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...

ಹಂಪಿ ಟೈಮ್ಸ್ ಇ-ಪೇಪರ್

ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

ಮೈಕ್ರೋ ನ್ಯೂಸ್

ಜಿಲ್ಲಾ ಉಸ್ತುವಾರಿ ಸಚಿವರಿಂದ ಜನವರಿ 27ಕ್ಕೆ ಜನತಾ ದರ್ಶನ

ಹಂಪಿ ಟೈಮ್ಸ್ ಹೊಸಪೇಟೆ

ರಾಜ್ಯದ ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಸಚಿವರು ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಜನವರಿ 27ರಂದು ವಿಜಯನಗರ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲು ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಅಂದು ಬೆಳಗ್ಗೆ 9.30ರಿಂದ 11.30ವರೆಗೆ ಸಚಿವರು ಹಾಗೂ ಶಾಸಕರು, ಚುನಾಯಿತ ಪ್ರತಿನಿಧಿಗಳು ಮತ್ತು ಜಿಲ್ಲಾಮಟ್ಟದ ಅಧಿಕಾರಿಗಳ ಉಪಸ್ಥಿತಿಯಲ್ಲಿ ಜನತಾ ದರ್ಶನ ಕಾರ್ಯಕ್ರಮ ನಡೆಯಲಿದೆ. ವಿಜಯನಗರ ಜಿಲ್ಲೆಯ ಸಾರ್ವಜನಿಕರು ತಮ್ಮ ಕುಂದುಕೊರತೆಯ ಅಹವಾಲುಗಳನ್ನು ಸಚಿವರು ನಡೆಸುವ ಜನತಾ ದರ್ಶನದಲ್ಲಿ ನೀಡುವ ಮೂಲಕ ಪರಿಹರಿಸಿಕೊಳ್ಳಲು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

26 ವರ್ಷದ ಮಹಿಳೆ ಕಾಣೆ

ಹಂಪಿ ಟೈಮ್ಸ್ ಹೊಸಪೇಟೆ

ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 26 ವರ್ಷದ ಎಲ್.ವೆಂಕುಬಾಯಿ ಎಂಬ ಮಹಿಳೆ ಕಾಣೆಯಾಗಿರುವ ಕುರಿತು ಪ್ರಕರಣ ದಾಖಲಾಗಿದೆ ಎಂದು ಠಾಣಾಧಿಕಾರಿ ತಿಳಿಸಿದ್ದಾರೆ.

ಚಹರೆ ವಿವರ: ಬಲಗೈ ಮೇಲೆ ನವಿಲು ಗರಿಯ ಟ್ಯಾಟೋ, ಎಡಗೈ ಮೇಲೆ MOM-DAD ಎಂದು ಟ್ಯಾಟೋ ಹಾಕಿಸಿಕೊಂಡಿರುತ್ತಾರೆ. ಕನ್ನಡ, ಲಂಬಾಣಿ ಮತ್ತು ಹಿಂದಿ ಭಾಷೆ ಬಲ್ಲವರಾಗಿರುತ್ತಾರೆ. ಕಪ್ಪು ಬಣ್ಣದ ಚೂಡಿದಾರ ಧರಿಸಿರುತ್ತಾರೆ.

ಕಾಣೆಯಾದ ಈ ಮಹಿಳೆಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಹೊಸಪೇಟೆ ಕಂಟ್ರೋಲ್ ರೂಮ್ ಸಂಖ್ಯೆ:94808057700, ಗ್ರಾಮೀಣ ಪೊಲೀಸ್ ಠಾಣೆಯ ದೂ.ಸಂ:08394-228233, ಗ್ರಾಮೀಣ ಪೊಲೀಸ್ ಠಾಣೆಯ ಪಿಐ ಅವರ ಮೊ.ಸಂ:9480805746 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

22 ವರ್ಷದ ಮಹಿಳೆ ಕಾಣೆ

ಹಂಪಿ ಟೈಮ್ಸ್ ಹೊಸಪೇಟೆ

ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 22 ವರ್ಷದ ಭಾಗ್ಯಮ್ಮ ಎಂಬ ಮಹಿಳೆ ಕಾಣೆಯಾಗಿರುವ ಕುರಿತು ಪ್ರಕರಣ ದಾಖಲಾಗಿದೆ ಎಂದು ಠಾಣಾಧಿಕಾರಿ ತಿಳಿಸಿದ್ದಾರೆ.

ಚಹರೆ ವಿವರ: ಕನ್ನಡ ಮತ್ತು ಹಿಂದಿ ಭಾಷೆ ಬಲ್ಲವರಾಗಿರುತ್ತಾರೆ. ಪಾಚಿ ಬಣ್ಣದ ಗೋಲ್ಡ್ ಕಲರ್ ಚುಕ್ಕಿಗಳು ಇರುವ ಚೂಡಿದಾರ, ಗೋಲ್ಡ್ ಕಲರ್ ಪ್ಯಾಂಟ್ ಧರಿಸಿರುತ್ತಾರೆ.

ಕಾಣೆಯಾದ ಈ ಮಹಿಳೆಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಹೊಸಪೇಟೆ ಕಂಟ್ರೋಲ್ ರೂಮ್ ಸಂಖ್ಯೆ:94808057700, ಗ್ರಾಮೀಣ ಪೊಲೀಸ್ ಠಾಣೆಯ ದೂ.ಸಂ:08394-228233, ಗ್ರಾಮೀಣ ಪೊಲೀಸ್ ಠಾಣೆಯ ಪಿಐ ಅವರ ಮೊ.ಸಂ:9480805746 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪಘಾತಕ್ಕೀಡಾದವರ ಪ್ರಾಣ ಉಳಿಸಲು ಹೆದ್ದಾರಿ ಆಪತ್ಬಾಂಧವರ ಸೇವೆ ಶ್ಲಾಘನೀಯ

ಎಸ್ಪಿ ಶ್ರೀಹರಿಬಾಬು ಬಿ.ಎಲ್. ಹೇಳಿಕೆ | ಪ್ರತಿಫಲಾಪೇಕ್ಷೆ ಇಲ್ಲದ ಸಹಾಯಕರ ಸೇವೆ | ಅತಿವೇಗದ ಚಾಲನೆ ಪ್ರಾಣಕ್ಕೂ ಕುತ್ತು

ಹೆದ್ದಾರಿಯಲ್ಲಿ ವಾಹನಗಳು ಅಪಘಾತಕ್ಕೀಡಾದ ಕೆಲವೇ ಕ್ಷಣಗಳಲ್ಲಿ ಅಂಬುಲೆನ್ಸ್, ಪೊಲೀಸ್, ಹೆದ್ದಾರಿ ಸಿಬ್ಬಂದಿಗೆ ಮಾಹಿತಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಅಪಘಾತಗಳಲ್ಲಿ ಸಿಲುಕಿದವರ ಪ್ರಾಣ ಉಳಿಸಲು ತೋರುವ ಮಾನವೀಯತೆಗಿಂತೆ ದೊಡ್ಡದಾದ ಉಪಕಾರ ಬೇರೊಂದಿಲ್ಲ. ರಾಷ್ಟ್ರೀಯ ಹೆದ್ದಾರಿ 50ರಲ್ಲಿ ವಾಹನಗಳು ಅಪಘಾತಗೊಳಗಾದಾಗ ಕ್ಷಣಾರ್ಧದಲ್ಲಿ ಗಾಯಗೊಂಡವರನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆಗೆ ಸಹಕರಿಸೋ ಹೆದ್ದಾರಿ ಸಹಾಯಕರ ಕಾರ್ಯ ಶ್ಲಾಘನೀಯ ಎಂದು ವಿಜಯನಗರ ಜಿಲ್ಲಾ ಎಸ್ಪಿ ಡಾ. ಶ್ರೀ ಹರಿಬಾಬು ಬಿಎಲ್ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ಇಲಾಖೆ ಮತ್ತು ಪ್ರಾದೇಶಿಕ ಸಾರಿಗೆ ಇಲಾಖೆ ಸಹಯೋಗದಲ್ಲಿ ವಿಜಯನಗರ ಜಿಲ್ಲಾ ಪೊಲೀಸ್ ಕಚೇರಿಯ ಸಭಾಂಗಣದಲ್ಲಿ ಶುಕ್ರವಾರ ಜರುಗಿದ ರಸ್ತೆ ಸುರಕ್ಷತಾ ಮಾಸಾಚರಣೆ ಜಾಗೃತಿ ಸಭೆಯಲ್ಲಿ ಮಾತನಾಡಿದರು. ಯಾರಿಗೋ ಅಪಘಾತವಾಗುತ್ತದೆ ಅಂದ್ರೆ ನಮಗ್ಯಾಕೆ ಅನ್ನೋ ಈ ಕಾಲದಲ್ಲಿಯೂ ರಾಷ್ಟ್ರೀಯ ಹೆದ್ದಾರಿ 50 ರಲ್ಲಿ ಅಪಘಾತಗಳು ಸಂಭವಿಸಿದಾಗ, ಕ್ಷಣಾರ್ಧದಲ್ಲಿ ಅವರನ್ನು ಆಸ್ಪತ್ರೆಗೆ ಸೇರಿಸಿ, ಚಿಕಿತ್ಸೆಗೆ ಸ್ಪಂದಿಸುತ್ತಾರೆ. ಹೈವೆಯ ಟೀ ಅಂಗಡಿ, ಹೊಟೇಲ್‌ನವರು, ಢಾಬಾ ಹೈವೇ ಪೊಲೀಸರು, ಎನ್‌ಎಚ್‌ಎಐ ಸಿಬ್ಬಂದಿ ಮತ್ತು ಮುನಿರಾಬಾದ್ ನಿಂದ ಆಲೂರುವರೆಗೂ ಗ್ರಾಮಸ್ಥರು ನೀಡುತ್ತಿರುವ ಸಹಕಾರ ಅವಿಸ್ಮರಣಿಯವಾಗಿದೆ. ಅಪಘಾತಗಳು ತಪ್ಪಿಸಬೇಕಾದ್ರೆ, ಕಾನೂನುಗಳನ್ನು ಸರಿಯಾಗಿ ಪಾಲನೆ ಮಾಡಬೇಕು. ಅತೀವೇಗವೂ ಕೂಡ ಅಪಘಾತಗಳಿಗೆ ಕಾರಣವಾಗುತ್ತದೆ. ಸಮಾಜದಲ್ಲಿ ಅಪಘಾತಗಳು ಸೇರಿದಂತೆ ನಾನಾ ಕ್ರೈಂಗಳು ತಡೆಯಲು ಸಮುದಾದಯಗಳ ಸಹಕಾರ ಅಗತ್ಯ. ಸಮುದಾಯಗಳು ಎಚ್ಚೆತ್ತುಕೊಂಡರೆ ಇಲಾಖೆಗಳ ಅಧಿಕಾರಿಗಳಿಗೆ ಮತ್ತಷ್ಟು ಜವಾಬ್ದಾರಿಗಳು ಹೆಗಲೇರಲಿವೆ. ಅಪಘಾತ ಮುಕ್ತ ಜಿಲ್ಲೆಯನ್ನಾಗಿಸಲು ಸಾರಿಗೆ ನಿಯಮ ಪಾಲಿಸುವ ಮೂಲಕ ಪ್ರತಿಯೊಬ್ಬರೂ ಸಹಕರಿಬೇಕು ಎಂದರು.

ವಾಟ್ಸ್‌ಪ್ ಬಳಕೆ ಹೀಗಿದ್ದರೆ ಚೆನ್ನ

ರಾಷ್ಟ್ರೀಯ ಹೆದ್ದಾರಿ 50 ರಲ್ಲಿ ಯಾವುದೇ ವಾಹನ ಯಾವುದೇ ಸಮಯದಲ್ಲಿ ಅಪಘಾತಕ್ಕೀಡಾದ ಕ್ಷಣಾರ್ಧದಲ್ಲಿ ಹೆದ್ದಾರಿಯುದ್ದಕ್ಕೂ ಇರುವ ಸಹಾಯಕರು ವಾಟ್ಸ್‌ಪ್ ಗ್ರೂಪಿನಲ್ಲಿ ಘಟನೆಯ ವಾಯ್ಸ್ ಸಂದೇಶವನ್ನು ಹಾಕಿ ಕೂಡಲೆ ಅಂಬುಲೆನ್ಸ್, ಪೊಲೀಸ್, ಹೆದ್ದಾರಿ ಸಹಾಯಕರ ಗಮನವನ್ನು ಸೆಳೆಯುತ್ತಾರೆ. ಕ್ಷಣ ಕ್ಷಣಕ್ಕೂ ಘಟನೆಯ ಕುರಿತು ವಾಹನ ಎಲ್ಲಿದೆ, ಎಷ್ಟು ನಿಮಿಷದಲ್ಲಿ ಬರಲಿದೆ ಎನ್ನುವ ವಿಷಯವನ್ನೂ ವಾಯ್ಸ್ ಮೂಲಕ ಹಂಚಿಕೊಳ್ಳುತ್ತಾರೆ. ಇದೊಂದು ಸ್ವಯಂ 'ಕಂಟ್ರೋಲ್ ರೂಂ' ತರ ಕೆಲಸ ಮಾಡುತ್ತಿದೆ. ಈ ವಾಟ್ಸಪ್ ಗ್ರೂಪಿನಲ್ಲಿ ಅಪಘಾತಗಳ ಮಾಹಿತಿ, ರಕ್ಷಣೆಗೆ ಬೇಕಾದ ವಿಷಯ ಹೊರತುಪಡಿಸಿದರೆ ಯಾವುದೇ ಗುಡ್‌ಮಾರ್ನಿಂಗ್, ಶುಭಾಶಯಗಳಿಗೆ ನಿಷೇಧ ಹೇರಲಾಗಿದೆ. ವಾಟ್ಸಪ್‌ಗಳು ಸಮಾಜಮುಖಿಯಾಗಿ ಬಳಸಿದರೆ ಎಷ್ಟು ಚೆನ್ನ ಎಂಬುದನ್ನು ತೋರಿಸಿಕೊಟ್ಟು ಮಾದರಿಯಾಗಿದ್ದಾರೆ ಹೆದ್ದಾರಿ 50ರ ಸಹಾಯಕರು.

ನಗರದ ವೈದ್ಯ ಡಾ. ಸೋಮಶೇಖರ್ ಕಬ್ಬೇರ್ ಮಾತನಾಡಿ, ಅಪಘಾತಗಳು ಬಿದ್ದ ವ್ಯಕ್ತಿ ಅರೆ ಪ್ರಜ್ಞಾವಸ್ತೆಯಲ್ಲಿದ್ದಾಗ, ಅಥವಾ ಪ್ರಜ್ಞೆ ಇಲ್ಲದಾಗ ನೀರು ಕುಡಿಸಬಾರದು, ಅದು ಸಮಸ್ಯೆಯಾಗುತ್ತದೆ. ಬಿದ್ದಾಗ ಉಸಿರಾಟಕ್ಕೆ ಅನುಕೂಲವಾಗುವಂತೆ ಮನುಷ್ಯನ ತಲೆ ಭಾಗ ಸ್ವಲ್ಪ ಮೇಲೆತ್ತಬೇಕು. ಕೆಲವೊಮ್ಮೆ ಎಚ್ಚರವಿದ್ದಾಗಲೂ ನೀರು ಕೊಟ್ಟಾಗ ಬೇರೆ ರೀತಿಯಲ್ಲಿ ಸಮಸ್ಯೆಗಳಾಗೋ ಸಂಭವಗಳಿರುತ್ತದೆ. ಫೋಟೋ, ವಿಡಿಯೋ ಶೂಟ್ ಮಾಡೋ ಬದಲು ಗೋಲ್ಡನ್ ಟೈಂ ನೊಳಗೆ ಅವರನ್ನು ಆಸ್ಪತ್ರೆಗೆ ಸೇರಿಸೋ ಕೆಲಸ ಮಾಡಬೇಕಿದೆ. ಚಾಲನೆಯಲ್ಲಿ ಮೊಬೈಲ್ ಬಳಕೆ ಮಾಡೋರ ಸಂಖ್ಯೆ ಹೆಚ್ಚಾಗಿದೆ. ಚಾಲನೆಯ ವೇಳೆ ಮೊಬೈಲ್ ಬಳಸಬಾರದು, ಸೀಟ್ ಬೆಲ್ಟ್, ಹೆಲ್ಮೆಟ್ ಧರಿಸೋದು ಕಡ್ಡಾಯವಾಗುವುದರಿಂದ ಸಾವು ತಪ್ಪುತ್ತದೆ. ಕ್ರೇಜ್‌ಗಾಗಿ ಬೈಕ್ ಓಡಿಸೋದು ಬಿಡಬೇಕು, ಅತಿವೇಗದ ಜಾಲನೆ ಅಪಘಾತಕ್ಕೆ ಆಹ್ವಾನ ಎಂದರು.

ಆರ್ ಟಿ ಓ ವಸಂತ್ ಚೌವ್ಹಾಣ್ ಮಾತನಾಡಿ, ಅಪಘಾತಗಳ ಪ್ರಮಾಣ ಕಡಿಮೆ ಮಾಡಲು ನಾನಾ ಇಲಾಖೆಗಳು ಸೇರಿ ನಡೆಸುವ ಜಾಗೃತಿ ಹಾಗೂ ಕಾರ್ಯಾಚರಣೆಗಳು ಸಹಕಾರಿಯಾಗಲಿವೆ ಎಂದರು.

ಇದೇ ವೇಳೆ ರಾಷ್ಟ್ರೀಯ ಹೆದ್ದಾರಿ 50 ಸಹಾಯಕರ ತಂಡವನ್ನು ಗೌರವಿಸಲಾಯಿತು. ಎಎಸ್ಪಿ ಸಲೀಂ ಪಾಷಾ, ಕೂಡ್ಲಿಗಿ ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ, ಎನ್‌ಎಚ್‌ಎಐ ಅಧಿಕಾರಿಗಳು, ಪೊಲೀಸ್ ಸಿಬ್ಬಂದಿ ಹಾಜರಿದ್ದರು.

ಇದೇ ವೇಳೆ ದಾವಣಗೆರೆ ಚಳ್ಳಕೆರೆ ರಾಷ್ಟ್ರೀಯ ಹೆದ್ದಾರಿ ಸಹಾಯಕರ ವಾಟ್ಸಾಪ್ ಗ್ರೂಪ್‌ಗೆ ಎಸ್ಪಿ ಡಾ. ಶ್ರೀಹರಿಬಾಬು ಬಿಎಲ್, ಆರ್‌ಟಿಓ ವಸಂತ್ ಚೌವ್ಹಾಣ್ ಚಾಲನೆ ನೀಡಿದರು.

ಹೆದ್ದಾರಿ ಸಹಾಯಕರ ವಾಟ್ಸ್‌ಪ್ ಅಡ್ಮಿನ್ ದಯಾನಂದ ಸಜ್ಜನ್, ಹಾಗೂ ಹೆದ್ದಾರಿ ಸಹಾಯಕರುಗಳಾದ ಶ್ರೀಕಂಠ ಸ್ವಾಮಿ, ಚಿನ್ನಾಪ್ರಿ, ಸಚೀನ್, ಸುಧರ್ಶನ್, ಅಜಯ್, ಮಹೇಶ್, ನಾಗರಾಜ್ ಗೌಡ, ಮಹಂತೇಶ, ವಿಶ್ವನಾಥ, ಬಾಬು, ಭೀಮರಾಜ್, ಸೆಮಿರ್, ಚನ್ನಬಸಪ್ಪ, ವಿನಯ್, ವಿಜಯ್ ಇತರರಿದ್ದರು.

ನಾಳೆ ಹೊಸಪೇಟೆ ಶ್ರೀ ರಾಮಕೃಷ್ಣ ಗೀತಾಶ್ರಮದಲ್ಲಿ ಚಂಡಿಕಾ ಹೋಮ

■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಬಳ್ಳಾರಿ ರಸ್ತೆಯಲ್ಲಿರುವ ಶ್ರೀ ರಾಮಕೃಷ್ಣ ಗೀತಾಶ್ರಮದಲ್ಲಿ ಜ.19ರಂದು ಲೋಕಕಲ್ಯಾಣಾರ್ಥ ಸಾಮೂಹಿಕ ಶ್ರೀ ಚಂಡಿಕಾ ಹೋಮ, ಶ್ರೀಮಾತೆ ಶಾರದಾ ದೇವಿ ಅವರ 172ನೇ ಜಯಂತ್ಯೋತ್ಸವ, ಜೀವಂತ ದುರ್ಗೆಯರ ಪೂಜೆ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಶ್ರೇಷ್ಠ ಚಿಂತಕರಿಂದ ಉಪನ್ಯಾಸ ಆಯೋಜಿಸಲಾಗಿದೆ.

ಭಾನುವಾರ ಬೆಳಿಗ್ಗೆ 8 ರಿಂದ ರಾತ್ರಿವರೆಗೂ ವಿವಿಧ ಕಾರ್ಯಕ್ರಮ ನಡೆಯಲಿವೆ. ದೇಶದ ಕಣ್ಣಾಗಿರುವ ಸೈನಿಕರ, ರೈತರ ಹಾಗೂ ರಾಷ್ಟ್ರಪ್ರೇಮಿ ನಾಯಕರ ಕ್ಷೇಮ ಕೋರಿ ಬೆಳಿಗ್ಗೆ 8ರಿಂದ ಮಧ್ಯಾಹ್ನ 12.30ರವರೆಗೆ ಶಾಸ್ತ್ರೋಕ್ತವಾಗಿ ದೀಪಕ್ ಭಟ್ ನೇತೃತ್ವದ ವೈದಿಕರ ತಂಡದಿಂದ ಶ್ರೀ ಚಂಡಿಕಾ ಹೋಮ ನಡೆಯಲಿದೆ. ಇದೇ ವೇಳೆ ಶ್ರೀ ಶಾರದಾ ಹೋಮ ಸಹ ಜರುಗಲಿದೆ. ಸಂಜೆ 6ರಿಂದ ರಾತ್ರಿ 9ರವರೆಗೆ ಶ್ರೀಮಾತೆ ಶಾರದಾದೇವಿ ಜಯಂತಿ, ಜೀವಂತ ದುರ್ಗೆಯರಿಗೆ ಪೂಜಿಸುವಂತಹ ವಿಶಿಷ್ಟ ಕಾರ್ಯಕ್ರಮ ಇರಲಿದೆ ಎಂದು ಆಶ್ರಮದ ಅಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಸುಮೇಧಾನಂದಜಿ ಮಹಾರಾಜ ತಿಳಿಸಿದ್ದಾರೆ.

ಬೆಂಗಳೂರು ಮಾತಾ ಅಮೃತಾನಂದಮಯಿ ಮಠದ ಅಧ್ಯಕ್ಷರಾದ ಪೂಜ್ಯಶ್ರೀ ಸ್ವಾಮಿ ಆತ್ಮನಿರತಾಮೃತ ಚೈತನ್ಯ, ಶಿವಮೊಗ್ಗ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಪೂಜ್ಯಶ್ರೀ ಸ್ವಾಮಿ ವಿನಯಾನಂದ ಮಹಾರಾಜ ದಿವ್ಯ ಸಾನ್ನಿಧ್ಯ ವಹಿಸಿ ಪ್ರವಚನ ನೀಡುವರು.ಖ್ಯಾತ ಚಲನಚಿತ್ರ ನಟ ಶ್ರೀಧರ್, ಹಿರಿಯ ಪತ್ರಕರ್ತ ಹಾಗೂ ಅಂಕಣಕಾರ ರವೀಂದ್ರ ದೇಶಮುಖ್, ಹಿರಿಯ ಐಪಿಎಸ್ ಅಧಿಕಾರಿ ರವಿ ಚನ್ನಣ್ಣನವರ್, ಧಾರವಾಡ ಜೆಎಸ್‌ಎಸ್ ಕಾಲೇಜಿನ ಉಪನ್ಯಾಸಕಿ ಸುಜಾತಾ ಕೊಂಬಳಿ ವಿಶೇಷ ಆಹ್ವಾನಿತರಾಗಿ ಆಗಮಿಸಿ ಚಿಂತನ ಮಂಡಿಸುವರು. ಶಾಸಕರು, ಗಣ್ಯರು ಸೇರಿ ಹಲವರು ಭಾಗವಹಿಸುವರು. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ತಿಳಿಸಿದ್ದಾರೆ.

ಭರವಸೆಯ ಬೋಧನೆ ಜತೆ ಆತ್ಮಸ್ಥೈರ್ಯ ತುಂಬಿ

ಕಣ್ವಕುಪ್ಪೆ ಗವಿಮಠದ ಡಾ. ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಹೇಳಿಕೆ | ಪ್ರಶಿಕ್ಷಣಾರ್ಥಿಗಳ ಪೌರತ್ವ ತರಬೇತಿ

■ **ಹಂಪಿ ಟೈಮ್ಸ್ ಕೂಡ್ಲಿಗಿ**

ಮನುಷ್ಯನ ಹುಟ್ಟು ಸಾವು ಪ್ರಕೃತಿಯ ಸಹಜ ಗುಣ. ಆದರೆ, ಈ ನಡುವಿನ ಬದುಕು ಶ್ರೇಷ್ಠವಾಗಿರಬೇಕು ಎಂದು ಜಗಳೂರು ತಾಲೂಕಿನ ಕಣ್ವ ಕುಪ್ಪೆ ಗವಿಮಠದ ಡಾ. ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ಜ್ಞಾನಭಾರತಿ ಬಿಇಡಿ ಕಾಲೇಜು ವತಿಯಿಂದ ಗುರುವಾರ ಪ್ರಶಿಕ್ಷಣಾರ್ಥಿಗಳ ಪೌರತ್ವ ತರಬೇತಿ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು. ಮನುಷ್ಯನಿಗೆ ಸಾವು ನಿಶ್ಚಿತ. ಆದರೆ ಹುಟ್ಟು, ಸಾವಿನ ನಡುವೆ ಬದುಕುವ ರೀತಿ, ಸಮಾಜದಲ್ಲಿ ತನ್ನ ಕೊಡುಗೆ ಅರಿತು ಬದುಕುವ ಸಾಧನೆ ಬಹಳ ಮುಖ್ಯವಾಗುತ್ತದೆ ಎಂದು ತಿಳಿಸಿದರು. ಜೀವನದಲ್ಲಿ ಕಷ್ಟ ಮತ್ತು ಸುಖ ಎಂಬುದು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸುಖ ಬಂದಾಗ ಹಿಗ್ಗಿ, ಕಷ್ಟ ಕಾಲದಲ್ಲಿ ಪರಿಹಾರ ಮಾರ್ಗ ಕಾಣದೆ ಸಾವಿನ ಕದ ತಟ್ಟುವುದರಲ್ಲಿ ಸುಲಭ ಮಾರ್ಗವನ್ನು ಕಂಡುಕೊಂಡಿದ್ದಾರೆ. ಇದರಿಂದ ನಮ್ಮ ಆಲೋಚನಾಶಕ್ತಿ ಎಷ್ಟು ಸಂಕುಚಿತಗೊಂಡಿದೆ ಎಂಬುದಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಇಂದಿನ ಯುವಜನತೆಯಲ್ಲಿ ದುಡಿಕಿನ ನಿರ್ಧಾರಗಳು ಹೆಚ್ಚಾಗಿವೆ. ತಾಳ್ಮೆ, ಸಹನೆ, ಆತ್ಮವಿಶ್ವಾಸ, ಆಲೋಚನಾ ಶಕ್ತಿಯಂತಹ ಮೌಲ್ಯಗಳ ಬೆಳವಣಿಗೆ ಕುಂಟಿತಗೊಂಡಿವೆ. ನಿಷ್ಪಯೋಜಕ ನಿಲುವುಗಳು ನಮ್ಮನ್ನು ಕತ್ತಲೆಯ ಕೂಪಕ್ಕೆ ತಳ್ಳುತ್ತವೆಂಬ ಆದ್ದರಿಂದ ನಮಗೆ ಅರಿವು ಮೂಡಬೇಕಿದೆ ಎಂದ ಅವರು, ಪ್ರಾಥಮಿಕ ಹಂತದಲ್ಲಿಯೇ ವಿಧ್ಯಾರ್ಥಿಗಳಿಗೆ ಭರವಸೆಯ ಭೋಧನೆ ಜತೆ ಆತ್ಮಸ್ಥೈರ್ಯ ತುಂಬುವ ಕೆಲಸವಾಗಬೇಕು ಶಿಕ್ಷಕರು ಈ ನಿಟ್ಟಿನಲ್ಲಿ ವಿಧ್ಯಾರ್ಥಿಗಳ ಉತ್ತಮ ಭವಿಷ್ಯವನ್ನು ತರಗತಿಯ ಕೋಣೆಯಲ್ಲಿ ಬರೆಯಬೇಕು ಎಂದು ತಿಳಿಸಿದರು. ಇದಕ್ಕೂ ಮುನ್ನ ಪ್ರಶಿಕ್ಷಣಾರ್ಥಿಗಳಿಗೆ ಪೌರತ್ವ ತರಬೇತಿ ಶಿಬಿರದ ಧ್ವಜಾರೋಹಣವನ್ನು ಕಣ್ವ ಕುಪ್ಪೆ ಗವಿಮಠದ ಡಾ. ನಾಲ್ವಡಿ ಶಾಂತ ಲಿಂಗ ಶಿವಾಚಾರ್ಯ ಸ್ವಾಮೀಜಿ ನೆರವೇರಿಸಿ, ಪ್ರತಿಜ್ಞಾ ವಿಧಿ ಭೋದಿಸಿದರು.

ಕೂಡ್ಲಿಗಿಯ ಎಡೆಯೂರು ಶ್ರೀ ಸಿದ್ದಲಿಂಗೇಶ್ವರ ಎಜ್ಯುಕೇಶನ್ ಟ್ರೆಸ್ಟ್‌ನ ಮುಖ್ಯಸ್ಥೆ ಕೆ.ಎಂ.ರೂಪ, ವೈಎಸ್ ಎಸ್ ಆಸ್ಪತ್ರೆ ವೈದ್ಯ ಡಾ.ಶಿವಮೂರ್ತಿ ಹಿರೇಮಠ, ಕಸಾಪ ತಾಲೂಕು ಅಧ

ಒಲಂಪಿಕ್ ಮೆಡಲ್ ತರುವ ರಾಜ್ಯದ ಕ್ರೀಡಾಪಟುಗಳಿಗೆ 6 ಕೋಟಿ ರೂ. ಪ್ರೋತ್ಸಾಹ

ಸಿಎಂ ಸಿದ್ದರಾಮಯ್ಯ ಘೋಷಣೆ

■ ಹಂಪಿ ಟೈಮ್ಸ್ ಮಂಗಳೂರು

ಕ್ರೀಡಾಪಟುಗಳು, ಕೋಚ್ ಗಳು ಮತ್ತು ಕ್ರೀಡಾ ಇಲಾಖೆ ಎಷ್ಟಾದರೂ ಹಣ–ಸವಲತ್ತು ಕೇಳಿ. ನಾನು ಕೊಡ್ತೀನಿ. ಆದರೆ ಒಲಂಪಿಕ್ ನಲ್ಲಿ ರಾಜ್ಯದ ಪಟುಗಳು ದೇಶಕ್ಕಾಗಿ ಮೆಡಲ್ ತನ್ನಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಯುವಜನ ಮತ್ತು ಕ್ರೀಡಾ ಇಲಾಖೆ ಮತ್ತು ಜಿಲ್ಲಾಡಳಿತ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ "ಕರ್ನಾಟಕ ಕ್ರೀಡಾಕೂಟ 2025 ನ್ನು ಉದ್ಘಾಟಿಸಿ ಮಾತನಾಡಿದರು. ಅಗತ್ಯ ವೇದಿಕೆ ಮತ್ತು ಉತ್ತಮ ಪ್ರೋತ್ಸಾಹ ಇಲ್ಲದಿದ್ದರೆ ಕ್ರೀಡಾ ಕ್ಷೇತ್ರ ಮತ್ತು ಕ್ರೀಡಾಪಟುಗಳು ಬೆಳವಣಿಗೆ ಆಗಲು ಸಾಧ್ಯವಿಲ್ಲ. ಆದ್ದರಿಂದ ನಮ್ಮ ಸರ್ಕಾರ ರಾಜ್ಯ, ರಾಷ್ಟ್ರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಹಾಜರಾತಿ ಸೇರಿ ಇನ್ನಿತರೆ ರಿಯಾಯ್ತಿಗಳನ್ನು ಕೊಡುವ ಬಗ್ಗೆ ಕ್ಯಾಬಿನೆಟ್ ನಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ಪುನರುಚ್ಚರಿಸಿದರು.

ಮುಂದಿನ ಬಜೆಟ್ ನಲ್ಲಿ ಮಂಗಳೂರು ಮತ್ತು ಉಡುಪಿ ಕ್ರೀಡಾಂಗಣಗಳ ಉನ್ನತೀಕರಣಕ್ಕೆ ತಲಾ 3 ಕೋಟಿ ರೂಪಾಯಿ ನಿಗಧಿ ಮಾಡ್ತೀನಿ ಎಂದು ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಘೋಷಿಸಿದರು.

ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಾಗ ಶೇ2 ರಷ್ಟು ಉದ್ಯೋಗಗಳು ಕ್ರೀಡಾಟುಗಳಿಗೆ ಮೀಸಲು ಇಡಲಾಗುವುದು. ಜೊತೆಗೆ ಪೊಲೀಸ್, ಅರಣ್ಯ ಇಲಾಖೆ ಸೇರಿ ಸಮವಸ್ತ್ರ ಧರಿಸುವ ಹುದ್ದೆಗಳಿಗೆ ಶೇ3 ರಷ್ಟು ಉದ್ಯೋಗ ಕ್ರೀಡಾಪಟುಗಳಿಗೆ ಉದ್ಯೋಗ ಮೀಸಲು ಇಡಲಾಗುವುದು ಎಂದು ಸಿಎಂ ಘೋಷಿಸಿದರು.

ಒಲಂಪಿಕ್ ನಲ್ಲಿ ಮೆಡಲ್ ತಂದವರಿಗೆ 6 ಕೋಟಿ ರೂಪಾಯಿ ಕೊಡ್ತೀವಿ. ಹಾಗೆಯೇ ಏಷ್ಯಾ ಕ್ರೀಡಾಕೂಟ ಮತ್ತು ರಾಷ್ಟ್ರಮಟ್ಟದಲ್ಲಿ ಪದಕ ತಂದವರಿಗೂ ನಗದು ಬಹುಮಾನ ಕೊಡುತ್ತಿದ್ದೇವೆ. ಈ ಪ್ರೋತ್ಸಾಹ ಸದುಪಯೋಗ ಪಡಿಸಿಕೊಂಡು ಮೆಡಲ್ ಗಳನ್ನು ತಂದು ಕ್ರೀಡಾಕ್ಷೇತ್ರವನ್ನು ಬೆಳಗಿಸಿ, ಬೆಳೆಸಿ ಎಂದು ಕರೆ ನೀಡಿದರು.

ವಿಧಾನಸಭಾ ಅಧ್ಯಕ್ಷ ಯು.ಟಿ.ಖಾದರ್, ಒಲಂಪಿಕ್ ಅಸೋಸಿಯೇಷನ್ ಅಧ್ಯಕ್ಷ ಕೆ.ಗೋವಿಂದರಾಜು, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ವಿಧಾನಪರಿಷತ್ ಸದಸ್ಯರಾದ ಮಂಜುನಾಥ್ ಭಂಡಾರಿ, ಐವನ್ ಡಿಸೋಜಾ, ಮಾಜಿ ಸಚಿವ ರಮಾನಾಥ ರೈ ಸೇರಿ ಜಿಲ್ಲೆಯ ಶಾಸಕರುಗಳು ಮತ್ತು ಪ್ರಮುಖರು ಉಪಸ್ಥಿತರಿದ್ದರು.

ಬೆಳಕಿಗಿಂತ ವೇಗವಾಗಿ ಮಾನವ ಚಲಿಸುವಂತಿದ್ದರೆ...?

ಮಹಾಭಾರತದ ಯಕ್ಷ ಪ್ರಸಂಗವೊಂದು ಎಲ್ಲರ ಗಮನ ಸೆಳೆಯುತ್ತದೆ. ಪಾಂಡವರು ಅರಣ್ಯದಲ್ಲಿದ್ದಾಗ ದಾಹ ತೀರಿಸಲು ನೀರು ತರಲು ಹೋದ ಯುದಿಷ್ಠಿರನ ಸಹೋದರರು ಎಷ್ಟು ಸಮಯ ಕಳೆದರೂ ಹಿಂದಿರುಗುವುದಿಲ್ಲ. ಇದನ್ನು ಗಮನಿಸಿದ ಯುದಿಷ್ಠಿರ ಕೊನೆಗೆ ತಾನೇ ಆ ಸರೋವರದತ್ತ ಬರುತ್ತಾನೆ. ಅಲ್ಲಿನ ದೃಶ್ಯ ಕಂಡು ಚಿಂತಾಕ್ರಾಂತನಾಗುತ್ತಾನೆ. ಯಾವುದೇ ಮಾನವ ದಾಳಿಯ ಕುರುಹುಗಳಿಲ್ಲದೇ ತನ್ನ ಸಹೋದರರು ಸತ್ತು ಬಿದ್ದಿರುವುದನ್ನು ನೋಡಿ ಭಯಭೀತನಾಗುತ್ತಾನೆ. ತಾನೂ ನೀರು ಕುಡಿಯಲು ಮುಂದಾದಾಗ ಅಶರೀರವಾಣಿಯೊಂದನ್ನು ಕೇಳುತ್ತಾನೆ. ಆಗ ಯುದಿಷ್ಠಿರ ಅದಕ್ಕೆ ತನ್ನ ಮುಂದೆ ಬಂದು ನಿಲ್ಲಲು ತಿಳಿಸುತ್ತಾನೆ. ಯಮನು ಯಕ್ಷನ ವೇಷ ಧರಿಸಿ ಯುದಿಷ್ಠಿರನ ಮುಂದೆ ನಿಂತು, 'ನಾನು ಕೇಳುವ ಪ್ರಶ್ನೆಗಳಿಗೆ ಪ್ರಾಮಾಣಿಕವಾಗಿ ಮತ್ತು ವೇಗವಾಗಿ ಉತ್ತರಿಸಿದರೆ ಮಾತ್ರ ನಿನ್ನ ಸಹೋದರರು ಪುನಃ ಜೀವ ಪಡೆಯುತ್ತಾರೆ. ಇಲ್ಲದೇ ಹೋದರೆ ನೀನೂ ಅವರ ಸಾಲಿಗೆ ಸೇರುವೆ' ಎನ್ನುತ್ತಾನೆ. ಸಹೋದರರನ್ನು ಬದುಕಿಸಿಕೊಳ್ಳುವ ಸಲುವಾಗಿ ಯುದಿಷ್ಠಿರ ಯಕ್ಷನ ಪ್ರಶ್ನೆಗಳಿಗೆ ಉತ್ತರಿಸಲು ಸಿದ್ದನಾಗುತ್ತಾನೆ. ಯಕ್ಷ ಕೇಳಿದ ಅನೇಕ ಪ್ರಶ್ನೆಗಳಲ್ಲಿ 'ಗಾಳಿಗಿಂತಲೂ ವೇಗವಾಗಿ ಚಲಿಸುವುದು ಯಾವುದು?' ಎಂಬುದೂ ಒಂದು. ಅದಕ್ಕೆ ಯುದಿಷ್ಠಿರನು "ಮನಸ್ಸು" ಎಂದು ಉತ್ತರಿಸುತ್ತಾನೆ. ಯಕ್ಷನು ಮುಂದಿನ ಪ್ರಶ್ನೆ ಕೇಳುತ್ತಾನೆ.

ಚಿಕ್ಕವರಿದ್ದಾಗ ದೂರದರ್ಶನದಲ್ಲಿ ಬರುವ 'ಸೂಪರ್‌ಮ್ಯಾನ್' ನಮಗೆಲ್ಲಾ ಕುತೂಹಲಭರಿತ ವ್ಯಕ್ತಿ ಚಿತ್ರಣ. ಕಟ್ಟಡಗಳಿಂದ ಜಿಗಿಯುವುದು, ಒಂದೇ ನೆಗೆತಕ್ಕೆ ಆಕಾಶಕ್ಕೆ ಹಾರುವುದು, ವೇಗವಾಗಿ ಓಡುವುದು ಇತ್ಯಾದಿಗಳನ್ನು ತೆರೆದ ಕಣ್ಣು ಮುಚ್ಚದಂತೆ ತದೇಕಚಿತ್ತರಾಗಿ ನೋಡುತ್ತಿದ್ದೆವು. ಅವನು ಪಿಸ್ತೂಲಿನ ಬುಲೆಟ್‌ಗಿಂತಲೂ ವೇಗವಾಗಿ ಚಲಿಸುವುದನ್ನು ಕಂಡು ಅಚ್ಚರಿಯಾಗುತ್ತಿತ್ತು. ನಾವೂ ಅವನಷ್ಟು ವೇಗವಾಗಿ ಓಡಲು ಸಾಧ್ಯವಾಗಿದ್ದರೆ ಹೇಗಿರುತ್ತಿತ್ತು? ಎಂದು ಕಲ್ಪಿಸಿಕೊಳ್ಳುತ್ತಿದ್ದೆವು.

ಯಕ್ಷನ 'ಗಾಳಿಗಿಂತಲೂ ವೇಗವಾಗಿ ಚಲಿಸುವುದು ಯಾವುದು?' ಎಂಬ ಪ್ರಶ್ನೆ ಹಾಗೂ ಸೂಪರ್‌ಮ್ಯಾನ್ ಬುಲೆಟ್‌ಗಿಂತಲೂ ಓಡುವ ಪ್ರಕ್ರಿಯೆಗಳೆರಡೂ ನನ್ನಲ್ಲಿ ಮತ್ತೊಂದು ಪ್ರಶ್ನೆಯೊಂದನ್ನು ಹುಟ್ಟು ಹಾಕಿದವು. ಗಾಳಿಗಿಂತ ಹಾಗೂ ಬುಲೆಟ್‌ಗಿಂತ ವೇಗವಾಗಿ ಚಲಿಸುವುದು ಬೆಳಕು. ಇಂತಹ ಬೆಳಕಿಗಿಂತಲೂ ವೇಗವಾಗಿ ನಾವು ಚಲಿಸಿಲು ಸಾಧ್ಯವೇ? ಸಾಧ್ಯವಾಗಿದ್ದರೆ ಏನಾಗ್ತಿತ್ತು? ಎಂಬ ಪ್ರಶ್ನೆ

ಸದಾ ಕಾಡುತ್ತಲೇ ಇರುತ್ತವೆ. ನನ್ನ ಈ ಪ್ರಶ್ನೆಗೆ ಒಂದಿಷ್ಟು ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿರುವೆ. ಈ ಪ್ರಶ್ನೆ ನಿಮ್ಮದೂ ಆಗಿದ್ದರೆ ಮುಂದೆ ಓದಿ.

1900ರ ದಶಕದ ಆರಂಭದಲ್ಲಿ ಪ್ರಪಂಚದ ವಿಜ್ಞಾನಿಗಳು ನ್ಯೂಟೋನಿಯನ್ ಸಿದ್ಧಾಂತವನ್ನು ಅನುಸರಿಸುತ್ತಿದ್ದರು. 1905ರಲ್ಲಿ ಗಣಿತಜ್ಞ ಹಾಗೂ ಭೌತಶಾಸ್ತ್ರಜ್ಞ ಆಲ್ಬರ್ಟ್ ಐನ್‌ಸ್ಟೀನ್ ವಿಶೇಷ ಸಾಪೇಕ್ಷತಾ ಸಿದ್ಧಾಂತವನ್ನು ಮಂಡಿಸಿದನು. ಇದು ಇಡೀ ಜಗತ್ತಿಗೆ ಚಕಿತಗೊಳಿಸುವ ಕಲ್ಪನೆಯನ್ನು ಮುಂದಿಟ್ಟಿತು. ಯಾವುದೇ ಆಧ್ಯತೆಯ ಉಲ್ಲೇಖವಿಲ್ಲದೇ ಸಮಯವೂ ಕೂಡಾ ಸಾಪೇಕ್ಷವಾದುದು ಎಂಬುದು ಹೊಸ ಆಲೋಚನೆಗಳಿಗೆ ನಾಂದಿ ಯಾಯಿತು. ಈ ಸಿದ್ಧಾಂತವು ಎರಡು ಪ್ರಮುಖ ತತ್ವಗಳನ್ನು ಮಂಡಿಸಿತ್ತು. ಮೊದಲನೆಯದಾಗಿ ನಿರಂತರವಾಗಿ ಚಲಿಸುವ ಎಲ್ಲಾ ಚೌಕಟ್ಟುಗಳು ಸಮಾನವಾಗಿ ಅನ್ವಯಿಸುತ್ತವೆ. ಇದು ಎಲ್ಲಾ ಚಲನೆಗಳನ್ನು ಒಳ ಗೊಂಡ ಸನ್ನಿವೇಶಗಳನ್ನು ನಿರ್ವ ಹಿಸಲು ಯಂತ್ರ ಶಾಸ್ತ್ರವನ್ನು ಸರಿಪಡಿಸುತ್ತದೆ. ಎರಡನೆ ಯಾದಾಗಿ ವಿಶೇಷವಾಗಿ ಬೆಳಕಿನ ವೇಗಕ್ಕೆ ಹತ್ತಿರವಿರುವ ವೇಗ(ಸಾಪೇಕ್ಷತಾ ವೇಗಗಳು ಎಂದು ಕರೆಯಲಾಗುತ್ತದೆ). ಇಂದು, ವಿಶೇಷ ಸಾಪೇಕ್ಷ ತೆಯು ಗುರು ತ್ವಾಕರ್ಷಣೆಯ ಪರಿಣಾಮಗಳು ನಗಣ್ಯ ವಾಗಿದ್ದಾಗ ಯಾವುದೇ ವೇಗ ದಲ್ಲಿ ಚಲನೆಯ ಅತ್ಯಂತ ನಿಖರವಾದ ಮಾದರಿ ಎಂದು ಸಾಬೀತಾಗಿದೆ.

ನಮ್ಮ ಪ್ರಶ್ನೆಗೆ ಎರಡನೆ ಸಿದ್ಧಾಂತವು ಉತ್ತರವನ್ನು ನೀಡುತ್ತದೆ. ಬೆಳಕು ಸೆಕೆಂಡಿಗೆ ಮೂರು ಲಕ್ಷ ಕಿಲೋಮೀಟರ್ ವೇಗದಲ್ಲಿ ಚಲಿಸುತ್ತದೆ. ಸೂಪರ್‌ಮ್ಯಾನ್‌ನಂತವರು ಬೆಳಕಿನ ಕಿರಣಗಳಿಗಿಂತ ವೇಗವಾಗಿ ಚಲಿಸಲು ಸಾಧ್ಯವಾಗಿದ್ದರೆ ಏನಾಗ್ತಿತ್ತು? ಎಂಬುದಕ್ಕೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಬಹುದಾಗಿದೆ.

E=mc2 ಇದು ಐನ್‌ಸ್ಟೀನ್ ಅವರ ಪ್ರಸಿದ್ಧ ಸಮೀಕರಣ. ಇದರಲ್ಲಿ E ಶಕ್ತಿ, m ದ್ರವ್ಯರಾಶಿ ಹಾಗೂ c ಎಂಬುದು ಬೆಳಕಿನ ವೇಗವಾಗಿದೆ. ಈ ಸಮೀಕರಣದ ಪ್ರಕಾರ ದ್ರವ್ಯರಾಶಿ ಮತ್ತು ಶಕ್ತಿಯು ಒಂದೇ ಭೌತಿಕ ಅಸ್ಥಿತ್ವ ಹೊಂದಿದ್ದು ಅವುಗಳನ್ನು ಪರಸ್ಪರ ಬದಲಾಯಿಸಬಹುದಾಗಿದೆ. ವಸ್ತುವಿನ ಚಲನೆಯಿಂದ ಉಂಟಾಗುವ ಶಕ್ತಿಯು ಅದರ ದ್ರವ್ಯರಾಶಿಯನ್ನು ಹೆಚ್ಚಿಸುತ್ತದೆ. ಅಂದರೆ ವಸ್ತುವು ವೇಗವಾಗಿ ಚಲಿಸಿದಂತೆಲ್ಲಾ ಅದರ ದ್ರವ್ಯರಾಶಿಯೂ ಸಹ ಹೆಚ್ಚಾಗುತ್ತಾ ಹೋಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ವಸ್ತುವು ವೇಗವಾಗಿ ಚಲಿಸಿದಾಗ ಮಾತ್ರ ಗಮನಾರ್ಹ ಬದಲಾವಣೆ ಗುರುತಿಸಬಹುದು. ಬೆಳಕಿನ ವೇಗದಲ್ಲಿ ಶೇಕಡಾ 10 ರಷ್ಟು ಚಲಿಸಿದರೆ ಅದರ ದ್ರವ್ಯರಾಶಿಯು ಶೇಕಡಾ 0.5 ರಷ್ಟು ಮಾತ್ರ ಹೆಚ್ಚಾಗುತ್ತದೆ. ಆದರೆ ಅದು ಬೆಳಕಿನ ವೇಗದಲ್ಲಿ ಶೇ.90 ರಷ್ಟು ಚಲಿಸಿದರೆ ಅದರ ದ್ರವ್ಯರಾಶಿ ದ್ವಿಗುಣವಾಗುತ್ತದೆ.

ವಸ್ತುವೊಂದು ಬೆಳಕಿನ ವೇಗವನ್ನು ಸಮೀಪಿಸುತ್ತಿದ್ದಂತೆ ಅದರ ದ್ರವ್ಯರಾಶಿಯು ವೇಗವಾಗಿ ಏರುತ್ತದೆ. ವಸ್ತುವು ಒಂದು ಸೆಕೆಂಡಿಗೆ 3,00,000 ಕಿ.ಮೀ ಪ್ರಯಾಣಿಸಲು ಪ್ರಯತ್ನಿಸಿದರೆ ಅದರ ದ್ರವ್ಯರಾಶಿ ಅನಂತವಾಗುತ್ತದೆ ಮತ್ತು ಅದನ್ನು ಚಲಿಸಲು ಅಗತ್ಯವಾದ ಶಕ್ತಿಯೂ ಆಗುತ್ತದೆ. ಈ ಕಾರಣಕ್ಕಾಗಿ ಯಾವುದೇ ಸಾಮಾನ್ಯ ವಸ್ತುವು ಬೆಳಕಿನ ವೇಗಕ್ಕಿಂತ ವೇಗವಾಗಿ ಚಲಿಸುವುದಿಲ್ಲ. ಈಗ ನಾವು ಮೂಲ ಪ್ರಶ್ನೆಯನ್ನು ಮತ್ತ ಜ್ಞಾಪಿಸಿಕೊಳ್ಳೋಣ. ನಾವು ಬೆಳಕಿನ ವೇಗದಷ್ಟು ವೇಗವಾಗಿ ಪ್ರಯಾಣಿಸಿದರೆ ಏನಾಗುತ್ತದೆ....? ಅಂತಹ ಸಂದರ್ಭದಲ್ಲಿ ಕೆಲವು ಆಸಕ್ತಿದಾಯಕ ಪರಿಣಾಮಗಳನ್ನು ಅನುಭವಿಸುತ್ತೇವೆ. ಇಲ್ಲಿ ಸಮಯದ ಹಿಗ್ಗುವಿಕೆಯ ಬಗ್ಗೆ ಒಂದಿಷ್ಟು ತಿಳಿಯುವುದು ಒಳಿತು. ಸಮಯದ ಹಿಗ್ಗುವಿಕೆ ಬಗ್ಗೆ ಒಂದು ಪ್ರಸಿದ್ಧ ಫಲಿತಾಂಶ ಹೇಳುವಂತೆ ಭೌತಶಾಸ್ತ್ರಜ್ಞರ ಪ್ರಕಾರ ಸಮಯದ ಹಿಗ್ಗುವಿಕೆ ಬಗ್ಗೆ ತಿಳಿದಿದ್ದೀರಾ? ಸಮಯದ ಹಿಗ್ಗುವಿಕೆಯು ವೇಗವಾಗಿ ಚಲಿಸುವ ವಸ್ತುಗಳ ಸಮಯ ಹೇಗೆ ನಿಧಾನವಾಗುತ್ತದೆ ಎಂಬುದನ್ನು ವಿವರಿಸುತ್ತದೆ. ಇದನ್ನು ಡಾಪ್ಲರ್ ಎಫೆಕ್ಟ್ ಎನ್ನುತ್ತಾರೆ. ಒಂದು ವೇಳೆ ನಾವು ಶೇ.90 ರ ಬೆಳಕಿನ ವೇಗದಲ್ಲಿ ಚಲಿಸುವ ರಾಕೆಟ್‌ನಲ್ಲಿ ಚಲಿಸಿದರೆ, ಸಮಯ ಅರ್ಧದಷ್ಟು ಕಡಿಮೆಯಾಗುತ್ತದೆ. ನಿಮ್ಮ ಗಡಿಯಾರ ಕೇವಲ ಹತ್ತು ನಿಮಿಷಗಳು ಮಾತ್ರ ಮುನ್ನಡೆಯುತ್ತದೆ, ಆದರೆ 20 ನಿಮಿಷಗಳಿಗಿಂತ ಹೆಚ್ಚು ಸಮಯ ಭೂಮಿಯ ಮೇಲಿನ ವೀಕ್ಷಕರ ಅರಿವಿಗೆ ಬಂದು ಹೋಗುತ್ತದೆ.

ಬೆಳಕಿನ ವೇಗದಲ್ಲಿ ನಾವು ಚಲಿಸಿದರೆ ಕೆಲವು ಚಿತ್ರ ದೃಶ್ಯ ಪರಿಣಾಮಗಳನ್ನು ಸಹ ಅನುಭವಿಸುತ್ತೇವೆ. ಅದರಲ್ಲಿನ ಒಂದು ಪರಿಣಾಮವನ್ನು ವಿಪಥನ ಎಂದು ಕರೆಯುತ್ತಾರೆ. ಬಾಹ್ಯಾಕಾಶ ನೌಕೆಯ ಮುಂದೆ ನಮ್ಮ ಇಡೀ ದೃಷ್ಟಿಕೋನ ಚಿಕ್ಕ ಸುರಂಗದ ಆಕಾರದ ರೀತಿಯಲ್ಲಿ ಮುಂದೆ ಸಾಗಿದಂತೆ, ಚಿಕ್ಕದಾದ ಕಿಂಡಿ ಹೇಗೆ ಕುಗ್ಗುತ್ತದೆ ಎಂಬುದನ್ನ ಸೂಚಿಸುತ್ತದೆ. ಹೀಗೆ ಸಂಭವಿಸಲು ಕಾರಣವೇನೆಂದರೆ. ಫೋಟಾನ್‌ಗಳು(ಅತಿ ಚಿಕ್ಕ ಗಾತ್ರದ ಪ್ಯಾಕೆಟ್‌ಗಳು). ನಮ್ಮ ಹಿಂದಿರುವ ಫೋಟಾನ್‌ಗಳು ಕೂಡ ನಮ್ಮನ್ನು ಹಿಂದಿಕ್ಕಿ ಮುನ್ನಡೆಯುತ್ತವಂತೆ ಕಂಡುಬರುತ್ತದೆ. ಆಗ ನಾವು ಗಮನಿಸುವ ಪರಿಣಾಮವೇ ಡಾಪ್ಲರ್ ಪರಿಣಾಮ. ಬೆಳಕನ ವೇಗದಲ್ಲಿ ನಾವು ಬಾಹ್ಯಾಕಾಶದಲ್ಲಿ ಚಲಿಸಿದರೆ, ನಮ್ಮ ಮುಂದೆ ಇರುವ ನಕ್ಷತ್ರಗಳಿಂದ ಬೆಳಕಿನ ತರಂಗಗಳನ್ನು ಒಟ್ಟುಗೂಡಿದಂತೆ ಕಾಣುತ್ತವೆ. ಅದರಲ್ಲಿ ಕೆಲವು ನಕ್ಷತ್ರಗಳ ತರಂಗಗಳ ಬಣ್ಣ ನೀಲಿಯಾಗಿ, ಮತ್ತೆ ಕೆಲವು ನಕ್ಷತ್ರಗಳ ತರಂಗಗಳು ಕೆಂಪಾಗಿ ಕಾಣುತ್ತದೆ. ನೀಲಿಯಾಗಿ ಕಾಣುವ ನಕ್ಷತ್ರಗಳು ನಮಗೆ ಸಮೀಪದಲ್ಲಿ ಹಾಗೂ ಕೆಂಪಾಗಿ ಕಾಣುವ ನಕ್ಷತ್ರಗಳು ನಮ್ಮಿಂದ ದೂರದಲ್ಲಿವೆ ಎಂಬುದನ್ನು ನಾವು ತಿಳಿಯಬಹುದು. ನಾವು ಬೆಳಕಿನ ವೇಗದಲ್ಲಿ ಚಲಿಸಿದರೆ ಇಂತಹ ವಿದ್ಯಮಾನಗಳನ್ನು ಗಮನಿಸಬಹುದು.

ಒಳಗೊಂದು ಹೊರಗ್ಹನ್ನೊಂದು ಆತ್ಮವಿಶ್ಲೇಷಣೆಗೆ ಹಿಡಿದ ಕೈಗನ್ನಡಿ

"ಹೊತ್ತು ಹೋಗ್ದಾಗ ಹೆತ್ತಮ್ಮನ ಕೂಡ ಆಡು" ಎಂಬ ಗಾದೆಮಾತಿದೆ ಯಾದರೂ ಬದುಕಿನ ಓಟದಲ್ಲಿ ಯಾರಲ್ಲಿ ಸಮಯವಿದೆ ಹೇಳಿ, ಎಲ್ಲರ ಕೈಗೊಂದು ಮೊಬೈಲ್ ಬಂದಾದಮೇಲೆ, ತಂದೆ–ತಾಯಿ, ಬಂಧು–ಬಳಗ, ಊಟ–ಆಟ–ಪಾಠ, ಹೊರಗಿನ ಪ್ರಪಂಚದ ಪರಿವೆ ಇದ್ದರೆ ತಾನೇ? ವೃತ್ತಿ ಬದುಕಿನಲ್ಲೂ ಸಹ ಮೊಬೈಲ್ ದಾಳಿಯಿಟ್ಟು ಮುಖತಃ ಮಾತು–ಕತೆ ಬಿದ್ದೋಗಿದೆ! ಎಲ್ಲ ಮೊಬೈಲ್ ನಲ್ಲಿಯೇ.., ಇದಕ್ಕೆ ನಾನೂ ಹೊರತಲ್ಲ ಬಿಡಿ ; ಹೀಗೆ ಆಳು–ಮೂಳು ಅಂತ ರೀಲ್ಸ್ ನೋಡ್ತಾ ಇರಬೇಕಾದರೆ ಶ್ರೀಮತಿ ಅರುಂಧತಿ ಶಂಕರನಾಗ್ ರವರ ಒಂದು ಸಂದರ್ಶನದ ತುಣುಕು ರೀಲ್ಸ್ ರೂಪದಲ್ಲಿ ನೋಡಿದೆ, ಕ್ಯಾಮರಾ ಎದಿರು ಬಣ್ಣ ಹಚ್ಚಿಕೊಂಡು ಪಾತ್ರಾಭಿನಯ ಮಾಡುವ ನಾವು ಅಷ್ಟೇ ಕಲಾವಿದರಲ್ಲ, ಬದಲಾಗಿ ಇಲ್ಲಿ ಎಲ್ಲರೂ ಮೂಜಗದೆದಿರು ಬಣ್ಣ ಹಚ್ಚಿಕೊಳ್ಳದ ಕಲಾವಿದರು, ಸೂರ್ಯೋದಯಕ್ಕೂ ಮುನ್ನ ಎದ್ದು ನಿತ್ಯಕರ್ಮಗಳನ್ನು ಮುಗಿಸಿ ಮನೆಯಿಂದ ಹೊರಬಿದ್ದರೆ ಸಾಕು, ಎಲ್ಲರೂ ಒಂದಲ್ಲ ಒಂದು ರೀತಿಯ ಶಿಕ್ಷಕ, ಡಾಕ್ಟರ್, ಲಾಯರ್, ಕಳ್ಳ–ಪೊಲೀಸ್ ಇತ್ಯಾದಿ.., ಮುಖವಾಡಗಳನ್ನು ಹಾಕಿಕೊಂಡು ತಮ್ಮ ತಮ್ಮ ಪಾಲಿನ ವೃತ್ತಿಬದುಕಿನ ಪಾತ್ರವನ್ನು ಮುಗಿಸಿ, ತುಂಬು ಆಯಾಸದಿ ಮನೆ ಸೇರಿ, ಬಟ್ಟೆ ಬದಲಿಸಿದ ಬಳಿಕ ತಮ್ಮ ನೈಜಬದುಕಿಗೆ ಹೊರಳುತ್ತಾರೆ. ಎಂಬ ನುಡಿಗಳು ಮನಸ್ಸಿನಾಳಕ್ಕೆ ಇಳಿದವು.

ಈ ಜಗವೇ ಒಂದು ನಾಟಕ ರಂಗ, ಮೇಲಿಹ ಸೂತ್ರಧಾರ ಆಡಿಸಿದಂತೆ ಆಡಬೇಕಾದ ನಾವೆಲ್ಲ ಪಾತ್ರಧಾರಿಗಳು, ಎಂಬ ಜನಜನಿತ ಮಾತನ್ನು ಒಪ್ಪುವುದಾದರೆ; ನಾವು ಪಾತ್ರಧಾರಿಗಳು, ದೇವರ ಸೂತ್ರಧಾರ ಎನ್ನುವುದಾದರೆ ನಾಟಕವನ್ನು ನೋಡುವ ಕಲಾರಸಿಕರು–ಪ್ರೇಕ್ಷಕರಾರು ಎಂಬ ಪ್ರಶ್ನೆ ಉದ್ಭವಿಸುತ್ತದೆ? ಕಲಾರಸಿಕರಿಗೆ ಮುದ ನೀಡುವಂತೆ ನಾಟಕ ರಚಿಸುವುದಾದರೆ,ಅಡಿಸುವುದಾದರೆ ಈ ಸಾವು–ನೋವು, ಕೊಲೆ–ಸುಲಿಗೆ–ರಕ್ತಪಾತವೆಲ್ಲ ಯಾಕೆ? ಬಾಳ ನಾಟಕ ಸುಖಾಂತ್ಯವೇ ಆಗಿರಬೇಕಿತ್ತು ಅಲ್ಲವೇ? ಹೀಗೆ ಯೋಚನೆಗಳ ಸುಳಿದಾಳಿಗೆ ಸಿಲುಕಿದ ಮನದ ತಲ್ಲಣಗಳಿಗೆ ನನ್ನದೇ ಸಾಂತ್ವಾನದ ನುಡಿಗಳಿವು.

ಇಲ್ಲಿ ಪಾತ್ರಧಾರಿಗಳೂ ನಾವೇ, ಪ್ರೇಕ್ಷಕರೂ ನಾವೇ ಎಂಬ ತೀರ್ಮಾನಕ್ಕೆ ಬಂದೆ ಅದೆಂತೆಂದರೆ? ಬಾಳ ನಾಟಕದಿ ತೆರೆಯ ಮುಂದಿನ ನಮ್ಮ ಪಾಲಿನ ಪ್ರವೇಶಕ್ಕಾಗಿ ಕಾದು ಕುಳಿತವರು, ಸರದಿ ಬಂದಾಗ ಪಾತ್ರಾಭಿನಯ ಮುಗಿಸಿ ಬಣ್ಣ ತೊಳೆದುಕೊಂಡು, ಮತ್ತೊಮ್ಮೆ ಪ್ರವೇಶ ಬರುವವರೆಗೂ ಕಾಯುವವರು ನಮ್ಮೆದುರಿನ ಪ್ರೇಕ್ಷಕರು, ನಮ್ಮ ಪಾತ್ರಾಭಿನಯದ ಬಗ್ಗೆ ಟೀಕೆ–ಟಿಪ್ಪಣಿಗಳನ್ನು ನೀಡುತ್ತ.., ವಿಮರ್ಶಿಸುವ ವಿಮರ್ಶಕರೂ ಇವರೇ ಆಗಿರುತ್ತಾರೆ. ಅಪ್ಪ–ಅಮ್ಮ, ಅಣ್ಣ–ತಮ್ಮ ಯಾರಿಗಂಜದಿದ್ದರೂ ನಾಲ್ಕು ಮಂದಿ ಮೆಚ್ಚುಗೆಗಾಗಿ ಜನಕ್ಕಂಜಿ ಜೀವನ ಮಾಡ್ಬೇಕು, ಇಲ್ಲವೇ ಮನಕ್ಕಂಜಿಯಾದರೂ ಜೀವನ ಮಾಡ್ಬೇಕು.

ಹೀಗೆ ಮುಖವಾಡದ ಬದುಕಿನಲ್ಲಿ ನಾವು ಒಳಗೊಂದು, ಹೊರಗೊಂದು ಅಲ್ಲಲ್ಲ ಹೊರಗ್ಹನ್ನೊಂದಾಗಿ ಬದುಕುವುದನ್ನು ನಾವು ನೋಡುತ್ತೇವೆ. ಇಂದು ನಾವು ಏನಾಗಿದ್ದೇವೋ ಅದು ನಾವಲ್ಲ, ನಾವು ಮತ್ತೊಂದು ಮಗದ

ಕವಿ ಮನಸು

ನೇಸರನ ಆಲಿಂಗನದಿ ಧರೆನಲಿದಾಗ

ನೇಸರನ ಆಲಿಂಗನದಿ
ಗಗನವದು ನಗುತಿರೆ
ಮಂಜಿನ ಹನಿಗಳೆಲ್ಲಾ ಚದುರಿರೆ
ಧರೆಯದ್ದು ನಲಿದರೆ ನಿಂತು
ನೋಡುವಾಸೆ

ನೇಸರನ ಆಲಿಂಗನಕ್ಕೆ
ಬೆಟ್ಟ ಗುಡ್ಡಗಳ ಕಾತರಿಕೆ
ಲತೆಗಳೆಲ್ಲಾ ಇಣಕುತ್ತಿರೆ
ತಾವರೆಗಳೆಲ್ಲಾ ಅರಳುತ್ತಿರೆ
ನಿಂತು ನೋಡುವಾಸೆ

ದುಂಬಿ ಮಕರಂದ ಹೀರುವಂತ
ಪುಷ್ಪ ಸುಗಂಧ ಸೂಸುವಂತ
ಹಕ್ಕಿಗಳು ಇಂಪಾಗಿಹಾಡುವಂತ
ಬಾನಾಡಿ ಬಾನಲ್ಲಿಹಾರುವಂತ
ನಿಂತು ನೋಡುವಾಸೆ

ಬೆಳೆದುನಿಂತ ಭತ್ತದ ಪೈರೆ
ಎತ್ತರಕ್ಕೆ ನಿಂತ ತೆಂಗಿನ ಮರವೇ
ನೇಸರನ ಅಲಿಂಗನ ಬಯಸಿ
ಕೈ ಚಾಚಿ ಎತ್ತಿಕೊಳ್ಳುವಂತಹದ
ನಿಂತು ನೋಡುವಾಸೆ

– ಜಿ.ಆರ್.ಬಿ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ಜಲ ಜೀವನ ಮಿಷನ್ ಹಾಗೂ ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

ಕಾಟಾಚಾರ ನಿರ್ವಹಣೆ ಸಲ್ಲದು ಮನೆ ಮನೆ ಗಂಗೆ ಅನುಷ್ಠಾಗೊಳಿಸಿ

ಅಧಿಕಾರಿಗಳಿಗೆ ವರದಿ ನೀಡಲು ಗ್ರಾ.ಕು.ನೀ.ನೈ ನಿರ್ದೇಶಕ ನಾಗೇಂದ್ರ ಪ್ರಸಾದ್ ಖಡಕ್ ಸೂಚನೆ



■ ಹಂಪಿ ಟೈಮ್ಸ್ ಹೊಸಪೇಟೆ

ವಿಜಯನಗರ ಜಿಲ್ಲಾ ಪಂಚಾಯತಿ ಕಾರ್ಯಾಲಯದ ಸಭಾಂಗಣದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವತಿಯಿಂದ ಜಲ ಜೀವನ ಮಿಷನ್ ಹಾಗೂ ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಗಳ ಅನುಷ್ಠಾನದ ಕುರಿತು ಜನವರಿ 16 ರಂದು ಜಿಲ್ಲಾ ಪಂಚಾಯತ್ ನಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಬೆಂಗಳೂರು ಗ್ರಾ.ಕು.ನೀ.ನೈ ಇಲಾಖೆಯ ನಿರ್ದೇಶಕರಾದ ನಾಗೇಂದ್ರ ಪ್ರಸಾದ್ ಜಿಲ್ಲೆಯಲ್ಲಿ ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ ಯೋಜನೆಯಡಿ ಮನೆಗೊಂದು ಶೌಚಾಲಯ ಪರಿಕಲ್ಪನೆಯಲ್ಲಿ ಜಿಲ್ಲೆಯ ಪ್ರತಿ ತಾಲೂಕುಗಳ ಪ್ರಗತಿಯನ್ನು ಪರಿಶೀಲಿಸಿ ಜನವರಿ ಮಾಸಾಂತ್ಯದೊಳಗೆ ಪ್ರತಿ ಮನೆ ಮನೆ ಸಮೀಕ್ಷೆ ನಡೆಸಿ ವಾಸ್ತವಾಂಶದ ಕುರಿತು ಮಾಹಿತಿಗಳನ್ನು ಸಂಗ್ರಹಿಸಿ ಜನರಿಗೆ ವೈಯಕ್ತಿಕ ಶೌಚಾಲಯಗಳನ್ನು ಕಟ್ಟಿಕೊಳ್ಳಲು ಪ್ರೋತ್ಸಾಹಿಸಬೇಕು. ತಾಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಗ್ರಾಮ ಪಂಚಾಯಿತಿಗಳನ್ನು ದತ್ತು ಪಡೆದು ಸರ್ಕಾರದ ಯೋಜನೆಗಳನ್ನು ಸಾರ್ವಜನಿಕರಿಗೆ ತಲುಪುವಂತೆ ಮಾಡಬೇಕು. ದತ್ತು ಪಡೆದ ಪಂಚಾಯಿತಿಗಳ ಪಟ್ಟಿಯನ್ನು ಕೇಂದ್ರ ಕಚೇರಿಗೆ ಕಳುಹಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಕಸ ವಿಲೇವಾರಿ ಘಟಕಗಳಲ್ಲಿ ಘನತ್ಯಾಜ್ಯ ವಸ್ತುಗಳನ್ನು ಸರಿಯಾಗಿ ನಿರ್ವಹಣೆ ಮಾಡದಿರುವುದು ಕಂಡುಬಂದಿದ್ದು ಇವುಗಳನ್ನು ತುರ್ತಾಗಿ ನಿರ್ವಹಣೆ ಮಾಡಿ ವರದಿ ನೀಡಬೇಕು ಎಂದು ಸೂಚಿಸಿದರು.

ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಜಲ ಜೀವನ ಮಿಷನ್, ಮನೆ ಮನೆಗೆ ಗಂಗೆ ಯೋಜನೆಯ ಅನುಷ್ಠಾನದ ಕುರಿತು ಜಿಲ್ಲೆಯಲ್ಲಿ ಸಾಧಿಸಲಾದ ಪ್ರಗತಿಯನ್ನು ಪರಿಶೀಲಿಸಿ ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳನ್ನುಜನರಿಗೆಅನುಕೂಲವಾಗುವ ರೀತಿಯಲ್ಲಿ ಪೂರ್ಣ ಗೊಳಿಸಿ, ಯೋಜನೆಯ ಅನುಷ್ಠಾನದಲ್ಲಿ ರಸ್ತೆ ಪುನರ್ ನಿರ್ಮಾಣ ಕಾಮಗಾರಿಗಳನ್ನು ಜರೂರಾಗಿ ಮಾಡಬೇಕು ಎಂದು ಗುತ್ತಿಗೆದಾರರಿಗೆ ಹಾಗೂ ಅಧಿಕಾರಿಗಳಿಗೆ ಸೂಚಿಸಿದರು.

ಯೋಜನೆಯಡಿ (FHTC) ಕಾರ್ಯಾತ್ಮಕ ನಳ ಸಂಪರ್ಕಗಳಲ್ಲಿ ನೀರು ಸರಬರಾಜು ಮಾಡಬೇಕು, ಈ ನೀರು ಶುದ್ದೀಕರಿಸಿ ಬಿಡುವುದರಿಂದಜನರಿಗೆಅನುಕೂಲವಾಗುತ್ತದೆ ಎಂದು ತಾಪಂ ಇಒಗಳಿಗೆ ತಿಳಿಸಿದರು.

ಹಾಗೆಯೇ ಜಲ ಜೀವನ್ ಮಿಷನ್ ಮತ್ತು ಸ್ವಚ್ಛ ಭಾರತ್ ಮಿಷನ್ ಯೋಜನೆಗಳ ಕುರಿತು ಗ್ರಾಮ ಮಟ್ಟದಲ್ಲಿ ಜನರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಗಳನ್ನು ಹೆಚ್ಚಾಗಿ ಮಾಡಿ ನೀರಿನ ದರವನ್ನು ಸಾರ್ವಜನಿಕರು ಕಡ್ಡಾಯವಾಗಿ ಪಾವತಿ ಮಾಡಬೇಕು ಎಂದು ತಿಳಿಸಿದರು.

ವಿಶ್ವ ಬ್ಯಾಂಕ್‌ನೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯಂತೆ ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಸುಸ್ಥಿರ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯ ಮಾರ್ಗಸೂಚಿಗಳನ್ನು ತಿಳಿಸಿದರು.

24/7 ನಿರಂತರ ನೀರು ಸರಬರಾಜು ಗ್ರಾಮಗಳನ್ನು ಆಯ್ಕೆಮಾಡಿ ಗ್ರಾಮಗಳನ್ನು ಘೋಷಿಸಿ ಯೋಜನೆ ಯನ್ನು ಯಶಸ್ವಿಗೊಳಿಸಲು ಎಲ್ಲಾ ಅಧಿಕಾರಿಗಳು ಸಮನ್ವಯವನ್ನು ಸಾಧಿಸಬೇಕು ಎಂದು ತಿಳಿಸಿದರು.

ಬಹು ನಿರೀಕ್ಷಿತ ಯೋಜನೆಯಾದ ಪಾವಗಡ ಬಹುಗ್ರಾಮ ಕುಡಿಯುವ ನೀರು ಯೋಜನೆಯನ್ನು ಅನುಷ್ಠಾಗೊಳಿಸುತ್ತಿರುವ ಗುತ್ತಿಗೆದಾರರಿಗೆ ಯೋಜನೆಯ ಕೆಲವೊಂದು ಲೋಪದೋಷಗಳನ್ನು ಸರಿಪಡಿಸಿ ಯೋಜನೆಯನ್ನು ಇಲಾಖೆಗೆ ಹಸ್ತಾಂತರಿಸಬೇಕು ಎಂದು ತಿಳಿಸಿ ಅಧಿಕಾರಿಗಳಿಗೆ ಈ ಕುರಿತು ಕ್ರಮವಹಿಸುವಂತೆ ತಿಳಿಸಿದರು.

ಈ ವೇಳೆ ಉಪ ಕಾರ್ಯದರ್ಶಿ ಜಾಫರ್ ಷರೀಫ್ ಸುತಾರಾ, ಉಪ ಕಾರ್ಯದರ್ಶಿ ಅಭಿವೃದ್ಧಿ ಸಿ.ಎಸ್.ಮಹೇಶ್, ಜಿಪಂ ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ, ಮುಖ್ಯ ಲೆಕ್ಕಾಧಿಕಾರಿ ಶ್ರೀನಿವಾಸ ಸೇರಿದಂತೆ ಜಿಪಂ ಮತ್ತುತಾಪಂ ಅಧಿಕಾರಿಗಳು ಭಾಗವಹಿಸಿದ್ದರು.

ಶಿಕ್ಷಣ ಪಡೆದರೆ ಅಭಿವೃದ್ಧಿ ಸಾಧ್ಯ

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿಕೆ

■ ಹಂಪಿ ಟೈಮ್ಸ್ ಬಳ್ಳಾರಿ

ಇಂದಿನ ಮಕ್ಕಳು ಆಧುನಿಕ ಮತ್ತು ಅಭಿವೃದ್ಧಿ ಹೊಂದಿದ ಭಾರತದ ನಿರ್ಮಾಪಕರು, ಆದ್ದರಿಂದ ಅವರ ಶಿಕ್ಷಣ ಮತ್ತು ಕಲ್ಯಾಣ ಮತ್ತು ಅವರಲ್ಲಿ ನೈತಿಕ ಗುಣಗಳ ಅಭಿವೃದ್ಧಿಗೆ ವಿಶೇಷ ಗಮನ ನೀಡಬೇಕು ಎಂದು ಕರ್ನಾಟಕದ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಹೇಳಿದರು.

ಬಳ್ಳಾರಿ ಜಿಲ್ಲೆಯ ಎಸ್‌ಬಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ ನಲ್ಲಿ ಬೃಂದಾ ನ್ಯಾಷನಲ್ ಪಬ್ಲಿಕ್ ಸ್ಕೂಲ್, ಬೃಂದಾ ಪಿಯು ಕಾಲೇಜು, ಬೃಂದಾ ಪದವಿ ಕಾಲೇಜು ಮತ್ತು ಸ್ಕಂದ ಇನ್‌ಸ್ಟಿಟ್ಯೂಷನ್ ಆಫ್ ನರ್ಸಿಂಗ್ ಅನ್ನು ಉದ್ಘಾಟಿಸಿ, ಅಂಕುರಂ–2025 ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಜೀವನದ ಯಶಸ್ಸಿನಲ್ಲಿ ಶಿಕ್ಷಣವು ದೊಡ್ಡ ಪಾತ್ರವನ್ನು ವಹಿಸುತ್ತದೆ, ಶಿಕ್ಷಣವು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಉಪಯುಕ್ತವಾಗಿದೆ, ಒಬ್ಬ ವ್ಯಕ್ತಿಯು ಶಿಕ್ಷಣ ಪಡೆದಾಗ ಅವನ ಅಭಿವೃದ್ಧಿಯು ಉತ್ತಮವಾಗಿರುತ್ತದೆ. ಶಿಕ್ಷಣವು ನಮಗೆ ಆಲೋಚನೆಗಳನ್ನು ವ್ಯಕ್ತಪಡಿಸುವ ಸಾಮರ್ಥ್ಯವನ್ನು ಒದಗಿಸುತ್ತದೆ. ಶಿಕ್ಷಣವನ್ನು ಎಂದಿಗೂ ಕದಿಯಲಾಗುವುದಿಲ್ಲ, ಶಿಕ್ಷಣವು ಎಂದಿಗೂ ವ್ಯರ್ಥವಾಗುವುದಿಲ್ಲ ಎಂದು ಹೇಳಿದರು.

ಸ್ವಾಮಿ ವಿವೇಕಾನಂದರು 'ನಮಗೆ ಅಂತಹ ಶಿಕ್ಷಣ ಬೇಕು, ಅದು ಚಾರಿತ್ರ್ಯವನ್ನು ನಿರ್ಮಿಸುತ್ತದೆ, ಮಾನಸಿಕ ಬೆಳವಣಿಗೆಯನ್ನು ಅಭಿವೃದ್ಧಿಪಡಿಸುತ್ತದೆ, ಬುದ್ಧಿವಂತಿಕೆಯನ್ನು ಅಭಿವೃದ್ಧಿಪಡಿಸುತ್ತದೆ ಮತ್ತು ಮನುಷ್ಯನನ್ನು ತನ್ನ ಸ್ವಂತ ಕಾಲಿನ ಮೇಲೆ ನಿಲ್ಲುವಂತೆ ಮಾಡುತ್ತದೆ.', 'ಎದ್ದೇಳಿ, ಎಚ್ಚರಗೊಳ್ಳಿ ಮತ್ತು ಗುರಿಯನ್ನು ಸಾಧಿಸುವವರೆಗೆ ನಿಲ್ಲಬೇಡಿ.' ಎಂದು ಹೇಳಿದ್ದರು. ಅವರ ಮಾರ್ಗದರ್ಶನದಲ್ಲಿ ಪ್ರತಿಯೊಬ್ಬ ಯುವಪೀಳಿಗೆ ನಡೆದು, ದೇಶದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.

ಪ್ರತಿಯೊಂದು ಮೂಲೆಯೂ, ಪ್ರತಿ ತರಗತಿಯೂ ಮತ್ತು ಇಲ್ಲಿನ ಪ್ರತಿಯೊಂದು ಚಟುವಟಿಕೆಯೂ ನಿಮ್ಮ ಅಭಿವೃದ್ಧಿಗೆ ಮೀಸಲಾಗಿದೆ. ನೀವು ಪ್ರತಿದಿನ ಹೊಸ ಕಲಿಕೆಯೊಂದಿಗೆ ಪ್ರಾರಂಭಿಸಿ. ವೈಫಲ್ಯದ ಬಗ್ಗೆ ಎಂದಿಗೂ ಭಯಪಡಬೇಡಿ, ಏಕೆಂದರೆ ಈ ವೈಫಲ್ಯಗಳು ನಿಮ್ಮನ್ನು ಬಲಪಡಿಸುತ್ತವೆ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಎಸ್‌ಬಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ಗಳ ಸಂಸ್ಥೆಗಳು ಶಿಕ್ಷಣವನ್ನು ಕೌಶಲ್ಯ ಮತ್ತು ನೈತಿಕ ಮೌಲ್ಯಗಳೊಂದಿಗೆ ಜೋಡಿಸುವ ಮೂಲಕ ಹೊಸ ಭಾರತ, ಉತ್ತಮ ಭಾರತವನ್ನು ರಚಿಸುವ ದೃಷ್ಟಿಯ ಕಡೆಗೆ ಕೆಲಸ ಮಾಡುತ್ತವೆ ಎಂಬ ಭರವಸೆ ಇದೆ ಎಂದು ಹೇಳಿ ಶುಭ ಹಾರೈಸಿದರು. ಸಮಾರಂಭದಲ್ಲಿ ಶಾಸಕ ಜನಾರ್ದನ ರೆಡ್ಡಿ, ಮಾಜಿ ಶಾಸಕ ಎಸ್.ಟಿ.ಸೋಮಶೇಖರ್ ರೆಡ್ಡಿ ಮುಂತಾದ ಗಣ್ಯರು ಉಪಸ್ಥಿತರಿದ್ದರು.

ಆಯುರ್ವೇದ ಬಳಕೆಯಿಂದ ಆಯುಷ್ಯ ವೃದ್ಧಿ ಉತ್ತಮ ಆರೋಗ್ಯಕ್ಕಾಗಿ ಪೌಷ್ಠಿಕ ಆಹಾರ ಸೇವಿಸಿ

ಸರ್ಕಾರಿ ಆಯುರ್ವೇದ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಮುನಿವಾಸುದೇವರೆಡ್ಡಿ ಹೇಳಿಕೆ

■ ಹಂಪಿ ಟೈಮ್ಸ್ ಹೊಸಪೇಟೆ

ವಿದ್ಯಾರ್ಥಿಗಳು ಆರೋಗ್ಯದ ಕಡೆ ಹೆಚ್ಚು ಗಮನಹರಿಸಿದಾಗ ಶೈಕ್ಷಣಿಕ ಸಂಕಲ್ಪಿತ ಗುರಿ ತಲುಪಲು ಸಾಧ್ಯ ಎಂದು ಸರ್ಕಾರಿ ಆಯುರ್ವೇದ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಮುನಿವಾಸುದೇವರೆಡ್ಡಿ ಹೇಳಿದರು.

ನಗರದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯದ ಆವರಣದಲ್ಲಿ ಗುರುವಾರ ಸಂಜೆ ಟಿ.ಎಸ್.ಪಿ ಅಡಿಯಲ್ಲಿ ಹಮ್ಮಿಕೊಂಡಿದ್ದ ವಿದ್ಯಾರ್ಥಿ ಚೇತನ ಆಯುಷ್ ಸೇವಾ ಗ್ರಾಮ ಕಾರ್ಯಕ್ರಮ ದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. ದೇಹಕ್ಕೆ ಅಗತ್ಯವಾದಷ್ಟು ನೀರು ಕುಡಿಯುವುದರ ಜೊತೆ ಪೌಷ್ಠಿಕ ಆಹಾರ ಸೇವಿಸಬೇಕು. ಜಂಕ್‌ಫುಡ್‌ಗಳಿಂದ ದೂರ ವಿದ್ದಷ್ಟು ಆರೋಗ್ಯ ವೃದ್ಧಿ ಯಾಗಲಿದೆ ಎಂದರು.

ವಿದ್ಯಾರ್ಥಿ ನಿಲಯದ ಮೇಲ್ವಿಚಾರಕಿ ಸೌಮ್ಯ ಕಾರ್ಯಕ್ರಮ ಉದ್ಘಾಟಿಸಿದರು.

ವೈದ್ಯ ಡಾ..ಎಸ್.ಕುಮಾರ್ ಮಾತ ನಾಡಿ, ಸಡೃಢರಾಗಿಲು ಆಯುರ್ವೇದ ಬಳಕೆ ಕುರಿತು ಮಾಹಿತಿ ತಿಳಿಸಿದರು.

ಡಾಕ್ಟರ್ ಪ್ರಸಾದ್ ಬಾಬು ಕೆ ಯೋಗದ ಮಹತ್ವವನ್ನು ತಿಳಿಸಿದರು, ಕಾರ್ಯಕ್ರಮದಲ್ಲಿ ಯೋಗ ತರಬೇತುದಾರರಾದ ಸುಜಾತ ಕಾರಣಂ ಉಪಸ್ಥಿತರಿದ್ದರು.

ಜಿಲ್ಲಾ ಆಯುಷ್ ಅಧಿಕಾರಿ ಡಾಕ್ಟರ್ ಸರಳಾ ದೇವಿ ಬಿ ಎಸ್ ಇವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಔಷದ ವಿತರಕ ಸಂತೋಷ್, ಗ್ರೂಪ್ ಡಿ ಸಿಬ್ಬಂದಿಗಳಾದ ಶಿವಕುಮಾರ್ ಇದ್ದರು. ಅನೂಷಾ , ಸಂತೋಷ ನಿರ್ವಹಿಸಿದರು.

ಜ.29 ರಂದು ಪುರಂದರದಾಸರ ಆರಾಧನೋತ್ಸವ

ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಹೇಳಿಕೆ। ಅಚ್ಚುಕಟ್ಟಾಗಿ ನೆರವೇರಿಸಲು ಸಿದ್ದತೆಗೆ ಸೂಚನೆ

■ ಹಂಪಿ ಟೈಮ್ಸ್ ಹೊಸಪೇಟೆ

ಜ.29 ರಂದು ಶ್ರೀ ಪುರಂದರದಾಸರ ಆರಾಧನೋತ್ಸವವನ್ನು ಅಚ್ಚುಕಟ್ಟಾಗಿ ನೆರವೇರಿಸಲು ಸಿದ್ದತೆ ಮಾಡಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಶುಕ್ರವಾರ ಮಾತನಾಡಿದರು.

ಜ.29 ರಂದು ಶ್ರೀ ಪುರಂದರದಾಸರ ಆರಾಧನೋತ್ಸವ ಆಚರಣೆಯನ್ನು ಹಂಪಿಯ ಶ್ರೀ ವಿರೂಪಾಕ್ಷ ದೇವಸ್ಥಾನದ ಆವರಣದಲ್ಲಿ ಶ್ರೀ ಪುರಂದರದಾಸರ ವೇದಿಕೆಯನ್ನು ನಿರ್ಮಿಸಿ ಬೆಳಗ್ಗೆ 6 ರಿಂದ 11 ಗಂಟೆಯ ವರೆಗೆ ಅಭಿಷೇಕ, ಪೂಜೆ, ಹಾಗೂ ಶ್ರೀ ಪುರಂದರದಾಸರ ಭಾವಚಿತ್ರವನ್ನು ಆನೆಯ ಮೇಲೆ ಮೆರವಣಿಗೆ ಮಾಡುವ ಮೂಲಕ ಜ್ಯೋತಿ ಉತ್ಸವ ಮಾಡಲಾಗುವುದು.

ಪ್ರತಿ ವರ್ಷದಂತೆ ಸಂಜೆ 5 ಗಂಟೆಯಿಂದ ರಾತ್ರಿ 10 ರ ವರೆಗೆ ವಿರುಪಾಕ್ಷೇಶ್ವರ ದೇವಸ್ಥಾನದ ಆವರಣದಲ್ಲಿ ನಿರ್ಮಿಸುವ ವೇದಿಕೆಯಲ್ಲಿ ಪುರಂದರರ ಕೀರ್ತನೆ, ಜನಪದ ಸಂಗೀತ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ತಿಳಿಸಿ ಸಾರ್ವಜನಿಕರು ಭಾಗವಹಿಸಲು ಮುಕ್ತ ಅವಕಾಶವಿರುತ್ತದೆ ಎಂದರು. ಸಭೆಯಲ್ಲಿ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ಹಂಪಿ ಟೈಮ್ಸ್‌ಪತ್ರಿಕೆಗಾಗಿ ಸಂಪರ್ಕಿಸಿ ಶಾರದ ಬುಕ್‌ಸ್ಟಾಲ್ ಹೊಸಪೇಟೆ ಮೊ: 9902909399

SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI

ಈಗಿಂದಲೇ ಪುನರ್‌ಮನನ ಮಾಡಿ

ಪರೀಕ್ಷೆಗೆ ನಾವು ಸಿದ್ಧ 62 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

10 ನೇ ತರಗತಿ ಹಿಂದಿ

* एक वाक्य में उत्तर लिखिए ।

कविता : मातृभूमि

1) भारत के खेत कैसे हैं ? (2019)
भारत के खेत **हरे-भरे और सुहाने** है ।

2)कवि भारत माता से क्या निवेदन कर रहे है?
कवि भारत माता से **जग का रूप बदलने के लिए** निवेदन कर रहे हैं । (2020)

3)भारत भूमि के अंदर क्या-क्या भरा हुआ है ?
भारत भूमि के अंदर **अपार खनिजो का व्यापक धन** भरा हुआ है ।

4) सुख- संपत्ति, धन- धाम को माँ कैसे बाँट रही है ?
सुख- संपत्ति, धन- धाम को माँ **मुक्त हस्त से** बाँट रही है ।

5)'जय हिन्द ' का नाद कहाँ- कहाँ पर गूँजना चाहिए ?
'जय हिन्द ' का नाद **सकल नगर और ग्रामो** पर गूँजना चाहिए ।

6) आज भारत माँ के साथ कौन है ?
आज भारत माँ के साथ **कोटि - कोटि भारतीय लोग हैं ।**

कश्मीरी सेब

7)प्रेमचंद जी का जी क्यो ललचा उठा ?
रंगदार गुलाबी सेब को देखकर प्रेमचंद जी का जी ललचा उठा ।

8) प्रेमचंद जी चौक में क्यो गये थे ?
दो- चार जरूरी चीजें खरीदने के लिए प्रेमचंद जी चौक में गये थे ।

9) लेखक प्रेमचंद जी को दूकान में क्या नजर आया ?
लेखक प्रेमचंद जी को दूकान में **रंगदार गुलाब सेब** नजर आया ।

10) टोमाटो किसका आवश्यक अंग बन गया है ?
टोमाटो **भोजन का** आवश्यक अंग बन गया है ।

11) रोज एक सेब खाने से किनकी जरूरत नहीं होगी ?
रोज एक सेब खाने से **डॉक्टरो की जरूरत** नहीं होगी ।

गिल्लू

12) गिलहरी गर्मी के दिनो मे कहाँ लेट जाता था ? (2022)
गिलहरी गर्मी के दिनो मे **सुराही पर** लेट जाता था ।

13) लेखिका ने गिल्लू के घावो पर क्या लगाया ?
लेखिका ने गिल्लू के घावो पर **पेन्सिलिन का मरहम** लगाया ।

14) गिल्लू का प्रिय खाद्य क्या था ?
गिल्लू का प्रिय खाद्य काजू था ।

अभिनव मनुष्य

15) आज की दुनिया कैसी है ?
आज की दुनिया **विचित्र और नवीन** है ।

16) परमाणु किसे देखकर काँपते हैं ?
परमाणु **मानव की हाथों को** देखकर काँपते हैं । (2022)

17) आज मानव का यान कहाँ जरहा है ?
आज मानव का यान **गगन में** जा रहा है ।

18) पवन का ताप किसके हुक्म पर चढता - उतरता है ? (2019)
पवन का ताप **मानव के** हुक्म पर चढता - उतरता है ।

19)नर किन-किनको एक समान लाँघ सकता है ?
नर **नदी, सागर, पर्वत** आदि को एक समान लाँघ सकता है । (2023)

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಹೆಚ್.ತುಕಾರಾಮ್ ನಾಯ್ಕ, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 17-01-2025

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1622.03 ಅಡಿ
ಒಳ ಹರಿವು	0 ಕ್ಯುಸೆಕ್
ಹೊರ ಹರಿವು	12005 ಕ್ಯುಸೆಕ್
ಇಂದಿನ ಸಾಮರ್ಥ್ಯ	67.200 ಟಿಎಂಸಿ
ಗರಿಷ್ಠ ಸಾಮರ್ಥ್ಯ	105.788 ಟಿಎಂಸಿ

ಕಳೆದ ವರ್ಷ ಇದೇ ದಿನ

ಇಂದಿನ ಮಟ್ಟ	1588.92 ಅಡಿ
ಒಳ ಹರಿವು	0 ಕ್ಯುಸೆಕ್
ಹೊರ ಹರಿವು	0 ಕ್ಯುಸೆಕ್
ಸಾಮರ್ಥ್ಯ	10.151 ಟಿಎಂಸಿ

ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

18-01-2025 – ಶನಿವಾರ

ತಿಥಿ	: ಚತುರ್ಥಿ
ಪಕ್ಷ	: ಕೃಷ್ಣ
ನಕ್ಷತ್ರ	: ಮಾಘಾ
ಯೋಗ	: ಸೌಭಾಗ್ಯ
ಕರಣ	: ಭವ
ಸೂರ್ಯೋದಯ	: 07:11:30
ಸೂರ್ಯಾಸ್ತ	: 18:03:30
ರಾಹು ಕಾಲ	: 09:55–11:16
ಯಮಘಂಡ ಕಾಲ	: 13:59–15:21
ಗುಳಿಕ ಕಾಲ	: 07:12–08:33

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ದಿನಪತ್ರಿಕೆ ಇರಲಿ.

ಡಿ..ವಿ.ಜಿ.

ಸಮಸ್ಯೆಗೆ ಸ್ಪಂದಿಸಲು ಸದಾ ಸಿದ್ಧ

ಸಂಸದ ಇ.ತುಕಾರಾಂ ಹೇಳಿಕೆ । ಹೊಸಪೇಟೆಯಲ್ಲಿ ಕಚೇರಿ ಉದ್ಘಾಟನೆ

■ ಹಂಪಿ ಟೈಮ್ಸ್ ಹೊಸಪೇಟೆ

ಜನಸಾಮಾನ್ಯರ ಸಮಸ್ಯೆಗೆ ಶೀಘ್ರ ಸ್ಪಂದಿಸಲು ಸಂಸದರ ಕಚೇರಿ ಸದಾ ಸಿದ್ದವಿರಲಿದೆ, ಅಭಿವೃದ್ಧಿಗೆ ಆದ್ಯತೆ ನೀಡುವಲ್ಲಿ ಜನಸಂಪರ್ಕ ಕಚೇರಿ ಸಹಕಾರಿ ಎಂದು ಬಳ್ಳಾರಿ ಲೋಕಸಭಾ ಸದಸ್ಯರಾದ ಇ. ತುಕಾರಾಂ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ನೂತನವಾಗಿ ಸ್ಥಾಪಿಸಿರುವ ಸಂಸದರ ಕಚೇರಿ ಉದ್ಘಾಟನೆ ಮಾಡಿ ಶುಕ್ರವಾರ ಅವರು ಮಾತನಾಡಿದರು, ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲಾ ವ್ಯಾಪ್ತಿಯಲ್ಲಿ ಸಂಸದರ ಕಚೇರಿ ತೆರೆಯಲಾಗಿದೆ. ಸಾಮಾನ್ಯ ಜನರು ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಸಂಸದರ ಗಮನಕ್ಕೆ ತರಲು ಅವಕಾಶಕ್ಕಾಗಿ ಜನಸಂಪರ್ಕ ಕಚೇರಿ ತೆರೆಯಲಾಗಿದೆ. ಕ್ಷೇತ್ರದ ಜನರ ಸಮಸ್ಯೆಗಳನ್ನು ಆಲಿಸಿ, ಬಗೆಹರಿಸಲು ಪ್ರಾಮಾಣಿಕವಾದ ಕಾರ್ಯ ನಿರ್ವಹಿಸಲಿದ್ದೇವೆ. ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಿ ಕಾರ್ಯ ನಿರ್ವಹಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ನಗರದ ಬಿಡಿಸಿಸಿ ಬ್ಯಾಂಕಿನ ಆವರಣದಲ್ಲಿ ಸಂಸದರ ಕಚೇರಿ ನಿರ್ಮಾಣಕ್ಕೆ ಅನುದಾನ ನೀಡಲಾಗುವುದು ಎಂದರು.

ಈ ವೇಳೆ ಸಂಡೂರು ವಿಧಾನಸಭಾ ಕ್ಷೇತ್ರದ ಶಾಸಕಿ ಅನ್ನಪೂರ್ಣ ತುಕಾರಾಂ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಪಂ ಸಿಇಒ ಮೊಹಮ್ಮದ್ ನೊಂಗ್ಜಾಯ ಅಕ್ರಮ್ ಅಲಿ, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಸೇರಿದಂತೆ ಹಿರಿಯ ಮುಖಂಡರು, ಇತರರಿದ್ದರು.

ಆನಂದ ಬಾಣ



ಉತ್ತಮ ಫಲಿತಾಂಶಕ್ಕೆ ವಿದ್ಯಾರ್ಥಿಗಳು ಪಂಚ ಸೂತ್ರಗಳನ್ನ ಪಾಲಿಸಿ

1. ಸಮಯ ನಿರ್ವಹಣೆ 2. ನಿಮ್ಮ ಗುರಿಯನ್ನು ನೆನೆಸಿಕೊಳ್ಳಿ 3. ಆರೋಗ್ಯ ನಿರ್ವಹಣೆ 4. ಶಾಂತ ಮನಸ್ಥಿತಿ ಇಟ್ಟುಕೊಳ್ಳಿ 5. ನಕಾರಾತ್ಮಕವಾಗಿ ಚಿಂತಿಸಬೇಡಿ

ಬಳ್ಳಾರಿಯಲಿ ಚಿಲ್ಲಿ ಮಾರುಕಟ್ಟೆ ಎಪಿಎಂಸಿಯಿಂದ 5 ಕೋಟಿ ರೂ.

■ ಹಂಪಿ ಟೈಮ್ಸ್ ಬಳ್ಳಾರಿ

ಅತಿ ಹೆಚ್ಚು ಮೆಣಸಿನಕಾಯಿ ಬೆಳೆಯುತ್ತಿರುವ ಬಳ್ಳಾರಿ ಜಿಲ್ಲೆಯಲ್ಲಿ ಚಿಲ್ಲಿ ಮಾರುಕಟ್ಟೆ ನಿರ್ಮಾಣ ಮಾಡಬೇಕು ಎಂಬ ಬೇಡಿಕೆ ಇದೆ. ಹೀಗಾಗಿ ಕೋಲ್ಡ್ ಸ್ಟೋರೇಜ್ ಜತೆಗೆ ಚಿಲ್ಲಿ ಮಾರುಕಟ್ಟೆಯನ್ನೂ ನಿರ್ಮಾಣ ಮಾಡಲಾಗುವುದು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಭರವಸೆ ನೀಡಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯಲ್ಲಿ ಶುಕ್ರವಾರ ಸಂಜೆ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಸಚಿವರು, ಚಿಲ್ಲಿ ಮಾರುಕಟ್ಟೆ ನಿರ್ಮಾಣಕ್ಕೆ ಎಪಿಎಂಸಿಯಿಂದ ಐದು ಕೋಟಿ ರೂ. ಅನುದಾನ ನೀಡಲಿದ್ದು, ಇತರ ಮೂಲಗಳಿಂದ ಅಗತ್ಯ ಸಂಪನ್ಮೂಲ ಕ್ರೋಢೀಕರಣ ಮಾಡಲಾಗುವುದು. ಶಾಸಕ ನಾರಾ ಭರತ್‌ರೆಡ್ಡಿ ಅವರೂ ನೆರವಿನ ಭರವಸೆ ನೀಡಿದ್ದಾರೆ ಎಂದರು.

ಈಗ ಚಿಲ್ಲಿ ಮಾರುಕಟ್ಟೆ ನಿರ್ಮಾಣಕ್ಕೆ ಗುರುತಿಸಿರುವ

23 ಎಕರೆ ಪ್ರದೇಶ ಕಡಿಮೆಯಾಗಲಿದೆ. ಭವಿಷ್ಯದ ದೃಷ್ಟಿಯಿಂದ ಕನಿಷ್ಟ 50 ಎಕರೆ ಪ್ರದೇಶದಲ್ಲಿ ನಿರ್ಮಾಣ ಮಾಡುವುದು ಸೂಕ್ತ ಎಂದು ಸಲಹೆ ನೀಡಿದರು.

ಪಿಪಿಪಿ ಮಾಡೆಲ್‌ನಲ್ಲಿ ಚಿಲ್ಲಿ ಮಾರುಕಟ್ಟೆ ನಿರ್ಮಾಣ ಕಷ್ಟ ಸಾಧ್ಯ. ಹೀಗಾಗಿ ಈ ಯೋಜನೆ ಬದಲಿಗೆ ಅಗತ್ಯ ಸಂಪನ್ಮೂಲ ಕ್ರೋಢೀಕರಣ ಮಾಡಿ ನಿರ್ಮಿಸಲು ಉದ್ದೇಶಿಸಲಾಗಿದೆ. ಎಪಿಎಂಸಿ ಸಚಿವನಾಗಿ ಈ ಜಿಲ್ಲೆಯಲ್ಲಿ ಚಿಲ್ಲಿ ಮಾರುಕಟ್ಟೆಯನ್ನು ನಿರ್ಮಾಣ ಮಾಡುವೆ ಎಂದು ಹೇಳಿದರು.

ಮಾರುಕಟ್ಟೆ ಶುಲ್ಕ ವಿನಾಯಿತಿ ಬೇಡಿಕೆ ಇಡಬೇಡಿ; ಕಳೆದ ಸರ್ಕಾರ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತರುವ ಪೂರ್ವದಲ್ಲಿ ವಾರ್ಷಿಕ ಸುಮಾರು 600ರಿಂದ 680ಕೋಟಿ ರೂ. ಆದಾಯ ಇತ್ತು . ಕಾಯ್ದೆ ತಿದ್ದುಪಡಿ ನಂತರ ಆದಾಯ 180 ಕೋಟಿ ರೂ.ಗಳಿಗೆ ಕುಸಿಯಿತು. ನಮ್ಮ ಪಕ್ಷ ಚುನಾವಣೆ ಪ್ರಣಾಳಿಕೆಯಲ್ಲಿ ಭರವಸೆ ನೀಡಿದಂತೆ ಎಪಿಎಂಸಿ ಕಾಯ್ದೆಯನ್ನು ಮರು ಸ್ಥಾಪನೆ ಮಾಡಿದ ನಂತರ ಆದಾಯದಲ್ಲಿ ಏರಿಕೆಯಾಗಿದ್ದು, ಈ ವರ್ಷ ಸುಮಾರು 450 ಕೋಟಿ ರೂ. ಸಂಗ್ರಹವಾಗುವ ವಿಶ್ವಾಸ ಇದೆ. ಕಾಯ್ದೆ ಮರುಸ್ಥಾಪನೆಯಿಂದ ರೈತರಿಗೂ ಅನುಕೂಲವಾಗಿದೆ ಎಂದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಎಪಿಎಂಸಿಯಲ್ಲಿ ತೆರಿಗೆ ವಸತಿ ಮತ್ತು ವೈದ್ಯಕೀಯ ಸೌಲಭ್ಯ ಒದಗಿಸುವ ಮೂಲಕ ರಾಜ್ಯಕ್ಕೆ ಮಾದರಿಯಾದ ಕೆಲಸ ಮಾಡಿದೆ. ಈ ಯೋಜನೆಯನ್ನು ಎಲ್ಲ ಎಪಿಎಂಸಿಗಳಲ್ಲಿ ವಾಣಿಜ್ಯೋದ್ಯಮ ಸಂಸ್ಥೆಗಳ ಸಹಕಾರದೊಂದಿಗೆ ವಿಸ್ತರಿಸುವ ಉದ್ದೇಶ ಹೊಂದಿದ್ದೇನೆ. ಈ ಯೋಜನೆ ರೈತರಿಗೆ ತುಂಬಾ ಅನುಕೂಲಕರವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ನಾರಾ ಭರತ್‌ರೆಡ್ಡಿ ಅವರು ಮಾತನಾಡಿ, ಚಿಲ್ಲಿ ಮಾರುಕಟ್ಟೆ ನಿರ್ಮಾಣಕ್ಕೆ ಎಪಿಎಂಸಿ ಸಚಿವ ಶಿವಾನಂದ ಪಾಟೀಲ ಅವರೊಂದಿಗೆ ಕೈ ಜೋಡಿಸಲಾಗುವುದು. ಸಂಸ್ಥೆಯ ಇತರ ಬೇಡಿಕೆಗಳ ಈಡೇರಿಕೆಗೂ ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು.

ಸಂಸ್ಥೆಯ ಅಧ್ಯಕ್ಷ ಯಶವಂತರಾಜ್ ನಾಗಿರೆಡ್ಡಿ ಮಾತನಾಡಿದರು. ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಕಾರ್ಯದರ್ಶಿ ಕೆ.ಸಿ. ಸುರೇಶ್‌ಬಾಬು, ಉಪಾಧ್ಯಕ್ಷರಾದ ಮಂಜುನಾಥ್ ಎ. ದೊಡ್ಡನಗೌಡ, ಜಂಟಿ ಕಾರ್ಯದರ್ಶಿ ಮರ್ಚಂಟ್ ಮಲ್ಲಿಕಾರ್ಜುನ್, ಚೇರ್ಮನ್ ಪಿ. ಶ್ರೀನಿವಾಸ ರಾವ್, ಪಿ.ಎ. ರಾಜಶೇಖರ್, ಸಿ. ಶ್ರೀನಿವಾಸ ರಾವ್ ಟನ್ ಅಸೋಸಿಯೇಷನ್, ಅಸೋಸಿಯೇಷನ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

ದಾನಕ್ಕಿಂತಲೂ ಶ್ರೇಷ್ಠ ಪರಿಕಲ್ಪನೆ ದಾಸೋಹ

ಕ್ಷೇತ್ರ ಶಿಕ್ಷಣಾಧಿಕಾರಿ ಪದ್ಮನಾಭಕರಣಂ ಅಭಿಮತ । ದತ್ತಿ ಉಪನ್ಯಾಸ

■ ಹಂಪಿ ಟೈಮ್ಸ್ ಕೂಡ್ಲಿಗಿ

ಅನ್ನ, ಅಕ್ಷರ, ಆಶ್ರಯ ಎಂಬ ತ್ರಿವಿಧ ದಾಸೋಹದ ಪರಿಕಲ್ಪನೆ ದಾನಕ್ಕಿಂತಲೂ ಶ್ರೇಷ್ಠವಾದದ್ದು ಮತ್ತು ವಿಶಾಲ ದೃಷ್ಟಿಕೋನವುಳ್ಳದ್ದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಪದ್ಮನಾಭಕರಣಂ ಅಭಿಪ್ರಾಯಪಟ್ಟರು.

ಅವರು ಕನ್ನಡ ಸಾಹಿತ್ಯ ಪರಿಷತ್ತು ಹೋಬಳಿ ಘಟಕ ಗುಡೇಕೋಟೆ ವತಿಯಿಂದ ಸರಕಾರಿ ಪ್ರೌಢಶಾಲೆ ರಾಮಸಾಗರಹಟ್ಟಿ ಯಲ್ಲಿ ಆಯೋಜಿಸಿದ್ದ "ದಾ.ಮ. ಐಮಡಿ ಶರಣಾರ್ಯರು ಕಾನಾಮಡಗು" ಇವರ ದತ್ತಿಯಲ್ಲಿ, ದತ್ತಿ ವಿಷಯವಾದ "ದಾಸೋಹ ಮಠಗಳ ಪರಂಪರೆ" ಕುರಿತು ಉಪನ್ಯಾಸ ನೀಡಿದರು.

ಕರ್ನಾಟಕದಲ್ಲಿ ದಾಸೋಹ ಮಠಗಳಿಗೆ ಸುದೀರ್ಘವಾದ ಇತಿಹಾಸವಿದ್ದು, ಅಂದಿನಿಂದ ಇಂದಿನವರೆಗೂ ತ್ರಿವಿಧ ದಾಸೋಹದ ಪರಿಕಲ್ಪನೆಗಳೊಂದಿಗೆ ಸಮಾಜದ ಸರ್ವರನ್ನು ಮೇಲೆತ್ತುವ ಪ್ರಯತ್ನ ಮಾಡುತ್ತಿವೆ ಎಂದು ತಿಳಿಸಿದರು.

ಕಸಾಪ ಹೋಬಳಿ ಘಟಕದ ಅಧ್ಯಕ್ಷ ಶೇಖರಯ್ಯ ಟಿ ಎಚ್ ಎಂ ಪ್ರಾಸ್ತಾವಿಕವಾಗಿ ಮಾತನಾಡಿ, ಸಾಹಿತ್ಯದಿಂದ ಸಾಮಾಜಿಕ ಬದಲಾವಣೆ ಸಾಧ್ಯ ಎಂಬುದನ್ನು ಹನ್ನೆರಡನೇ ಶತಮಾನದ ವಚನ ಚಳುವಳಿ ನಿರೂಪಿಸಿದೆ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಗುರುಗಳಾದ ವೈ ಎಂ ಈಶಪ್ಪ ಮಾತನಾಡಿ, "ಮಕ್ಕಳಲ್ಲಿ ಸಾಹಿತ್ಯಾಭಿರುಚಿ ಮೂಡಿಸಲು ಮತ್ತು ಕನ್ನಡದ ಹಿರಿಮೆ ಗರಿಮೆಗಳನ್ನು ತಿಳಿಸಲು ಇಂತಹ ಕಾರ್ಯಕ್ರಮಗಳು ಸೂಕ್ತ ವೇದಿಕೆ ಒದಗಿಸುತ್ತವೆ" ಎಂದು ಅಭಿಪ್ರಾಯಪಟ್ಟರು.

ಮತ್ತೊಂದು ದತ್ತಿಯಾದ ದಿವಂಗತ ಹಿ.ಮ ನಾಗಯ್ಯ ಇವರ ದತ್ತಿಯ ವಿಷಯ: "ಕನ್ನಡ ಕಾವ್ಯ ಗಮಕಲೆ"ಕುರಿತು ಶಿಕ್ಷಕ ಶಿವಾನಂದ ಬಿ ಬಿ ಇವರು ಅರ್ಥಪೂರ್ಣವಾಗಿ ವಿಷಯ ಮಂಡಿಸಿದರು. ಕವಿರಾಜಮಾರ್ಗಕಾರನಿಂದ ಹಿಡಿದು ಆಧುನಿಕ ಕಾಲದ ಭೂಸನೂರು ಮಠದವರೆಗೂ ರಚಿತವಾಗಿರುವ ಕನ್ನಡ ಕಾವ್ಯಗಳನ್ನು ಉದಾಹರಿಸುತ್ತಾ, ಬಹಳಷ್ಟು ಕವಿಗಳು ತಮ್ಮ ಇಡೀ ಜೀವನವನ್ನೇ ಕಾವ್ಯ ರಚನೆಗಾಗಿ ಮುಡಿಪಿಟ್ಟರು. ಆ ಬದ್ಧತೆ ನಮಗೆ ಆದರ್ಶಪ್ರಾಯವಾದುದೆಂದು ಅಭಿಪ್ರಾಯ ಪಟ್ಟರು.

ಇಂತಹ ಕವಿಪುಂಗವರ ಕಾವ್ಯಗಳನ್ನು ಅಧ್ಯಯನ ಮಾಡಿ ತಾವೂ ಕಾವ್ಯಗಳನ್ನು ರಚಿಸುವಂಥಾಗಿ ಎಂದು ಮಕ್ಕಳಿಗೆ ಸ್ಫೂರ್ತಿ ತುಂಬಿದರು. ಕನ್ನಡ ಕಾವ್ಯದಲ್ಲಿ ಗಮಕಲೆಗೆ ಶ್ರೇಷ್ಠ ಸ್ಥಾನವಿದೆ ಎಂದು ತಿಳಿಸಿದರು.

ಸಸಿಗೆ ನೀರೆಯುವ ಮೂಲಕ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಗಣ್ಯರು ಕಾರ್ಯಕ್ರಮ ಉದ್ಘಾಟಿಸಿದರು.

ಗಾಯಕ ಆರ್ ಬಿ ಗುರುಶಂಕರಪ್ಪ ಅವರು ತತ್ವಪದಗಳನ್ನು ಹಾಡಿದರು. ಎಸ್ ಡಿ ಎಂ ಸಿ ಅಧ್ಯಕ್ಷೆ ಕರಿಬಸಮ್ಮ ಅಧ್ಯಕ್ಷತೆವಹಿಸಿದ್ದರು. ವಿದ್ಯಾರ್ಥಿನಿಯರು ಪ್ರಾರ್ಥಿಸಿದರು. ಶಿಕ್ಷಕರಾದ ರಾಘವೇಂದ್ರ, ಸಿದ್ದಯ್ಯ , ಸುದರ್ಶನ್ ನಿರ್ವಹಿಸಿದರು.

ಶಿಕ್ಷಣದ ಗುಣಮಟ್ಟ ಹೆಚ್ಚಿಸಲು 3 ಸೂತ್ರಗಳು

1. ಶಾಲೆಗೆ ಹೋಗದ ಶಿಕ್ಷಕರನ್ನು (Drop out teachers) ಶಾಲೆಗೆ ಕಳುಹಿಸಿ
2. ಶಾಲೆಗೆ ಹೋದ ಶಿಕ್ಷಕರನ್ನು ತರಗತಿಗೆ ಕಳಿಸಿ
3. ತರಗತಿಗೆ ಹೋದ ಶಿಕ್ಷಕರಿಂದ ಪಾಠ ಮಾಡಿಸಿ..

- ಮಹಿಮ

14 ಭಾಷೆಗಳಲ್ಲಿ ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ... www.hampitimes.com